ಕರ್ನಾಟಕ
ಸ್ಕೌಟ್ ಮತ್ತು ಗೈಡ್
KARNATAKA SCOUT & GUIDE
News Magazine

VOL.4 MARCH 2004 No. 3

ಧಾರವಾಡದಲ್ಲಿ ದಿ.16-2-04ರಂದು ನಡೆದ ಬೆಳಗಾಂ ವಿಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಪದಾಧಿಕಾರಿಗಳ ಸಮಾವೇಶವನ್ನು ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀ ಗೌರವ ಗುಪ್ತ ಭಾ.ಆ.ಸೇ. ಅವರು ಉದ್ಘಾಟಿಸುತ್ತಿರುವುದು. ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರಾದ ಶ್ರೀ ಜಿ.ಎಂ. ಧನಂಜಯ, ಭಾ.ಆ.ಸೇ. ಅವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಕೊಂಡಜ್ಜಿ ಬ.ಷಣ್ಮುಖಪ್ಪ ಅವರು ಸ್ವಾಗತಿಸುತ್ತಿರುವುದು. ಚಿತ್ರದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎಂ. ಲೊಂಡೆಯವರನ್ನು ಕಾಣಬಹುದು.

ಮಡಿಕೇರಿಯಲ್ಲಿ ದಿ. 26-2-04ರಂದು ನಡೆದ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳದಲ್ಲಿ ಕೊಡಗಿನ ಜಿಲ್ಲಾಧಿಕಾರಿಗಳಾದ ಶ್ರೀ ಶ್ರೀಕಾಂತ್ ವಾಲಗದ್, ಭಾ.ಆ.ಸೇ. ಇವರು ಮಾತನಾಡುತ್ತಿರುವುದು.

ಕರ್ನಾಟಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
೮೬ ವರ್ಷಗಳ ಪರಿಪೂರ್ಣ ಸೇವೆಯಲ್ಲಿ
1917-2004

ಪ್ರಕಾಶಕರು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

Shivajinagar Local Association Presented Rs. 20,000/- Cheque towards "SHANTHI GRUHA DEVELOPMENT FUND"

Shivajinagar Local Association, Bangalore North District of Bharat Scouts and Guides presented Cheque of Rs. 20,000/- to Sri Kondajji B. Shanmukhappa, State Chief Commissioner towards "Shanthi Gruha Training Centre Development Fund" on 24th March 2004 at a get together function held at Bishop Cotton Girls High School, St. Marks Road, Bangalore.

Smt M. Shanthimathi, Joint State Secretary, Sri M.S. Nataraj, ASC(S), Fund Raising, Sri T.S. Lucas ASC(S), Planing and Development, Smt Geetha Nataraj, ASC(G) Bangalore Division, Miss Rathnanjali Nicodemus, President, LA, Dr. Stella Samuel, Principal, Bishop Cotton Girls High School, and Vice-President, Bangalore North District, Smt. B.V. Ramalatha, District Commissioner (Guides), Sri P. Nanda Kumar, District Secretary, Sir V. Kulakarni, Former District Secretary, Sri Sampath Kumar, Asst. District Commissioner, Sri S.A. Kribanandan, principal, Stracey Memorial Composite P.U. College, Mrs. Saroja Ganeshan, Vice-President, Sri Jai Pinto, Secretary, Miss. B. Revathy, Leader Trainer (Bul Bul) Miss. Krupa Vijai, Treasurer were present on the occasion

State Chief Commissioner convey his gratitude to LA and its office bearers for the handsum donation and said that this is the first donation cheque received by him towards this Project. Guides from Bishop Cotton Girls School presented a Patriotic Dance. All the Donors and Members present were presented with Memento. Bishop Cotton Girls School hosted High Tea to the Participants.

DOCUMENTARY FILM ON SCOUTING AND GUIDING

*The Bharat Scouts and Guides Karnataka has produced a Documentary film titled "**BARAVASEYA BELAKU**" (Promising Light) on Scouting and Guiding.*

The Documentary Film traces the History of the Movement, Fundamentals, Programme of Activities, National Jamboree, Karnataka Jamborette, Cub & Bulbul Utsav, Training Centres in Karnataka, 75th year Celebration of WAGGGS and the vision 2007.

The copy of the Documentary is available in CD's & VHS Tapes format @ Rs. 300/- per copy at State Headquarters, Bangalore.

Please write to State Headquarters and reserve your Copy.

ಕರ್ನಾಟಕ
ಸ್ಕೌಟ್ ಮತ್ತು ಗೈಡ್
KARNATAKA SCOUT & GUIDE
News Magazine

Vol - 4 **March - 2004** **No.3**

ಸಂಪಾದಕ ಮಂಡಳಿ

ಅಧ್ಯಕ್ಷರು
ಗೊ. ರು. ಚನ್ನಬಸಪ್ಪ

ಸಂಪಾದಕರು
ಎ. ಶಿವಮಹಾದೇವನ್

ಉಪ ಸಂಪಾದಕರು
ಎಂ. ಎ. ಚೆಲ್ಲಯ್ಯ
ಎನ್. ಶ್ರೀನಿವಾಸನ್

ಸದಸ್ಯರು
ಎಂ. ಶಾಂತಿಮತಿ
ನಾರಾಯಣಶೆಟ್ಟಿ
ಜಾನಕಿ ವೇಣುಗೋಪಾಲ್
ಮಾಧವಸಿಂಗ್
ಕೆ.ಕೆ. ರೀಲ

ಪರಿವಿಡಿ

ಮುಖ್ಯ ಆಯುಕ್ತರ ನುಡಿ 4

ಜಿಲ್ಲಾ ವಾರ್ತೆಗಳು 6

Quiz 5 : On Scouting for Boys 27

If a man reaches the heart of his own religion, he has reached the heart of the others too.

- Mahatma Gandhi

ರಾಜ್ಯ ಮುಖ್ಯ ಆಯುಕ್ತರ ನುಡಿ

ಮಾನ್ಯರೆ,

2003-04 ಸಾಲಿನ ಮುಕ್ತಾಯದ ಹಂತಲ್ಲಿದ್ದೇವೆ. ರಾಜ್ಯದಾದ್ಯಂತ ವರ್ಷದಲ್ಲಿ ವಿವಿಧ ಹಂತದ ಕಾರ್ಯಕ್ರಮಗಳು - ತರಬೇತಿಗಳು - ಸ್ಥಳೀಯ - ಜಿಲ್ಲೆ - ರಾಜ್ಯ ಮಟ್ಟದಲ್ಲಿ ಜರುಗಿವೆ. ಚಳವಳಿಯ ವಿವಿಧ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಸ್ರಾರು ಕಾರ್ಯಕರ್ತರುಗಳು - ತರಬೇತುದಾರರು - ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು - ಸರ್ಕಾರಿ ಹಾಗೂ ಸರ್ಕಾರೇತರ ಶಿಕ್ಷಣ ಸಂಸ್ಥೆಗಳು, ಗ್ರಾಮ ಪಂಚಾಯತ್, ತಾಲ್ಲೂಕು - ಜಿಲ್ಲಾ ಪಂಚಾಯತ್‌ಗಳು, ಪುರಸಭೆ - ಪಟ್ಟಣ ಪಂಚಾಯತ್‌ಗಳು ಚಳವಳಿಯ ಬೆಳವಣಿಗೆಗೆ - ಮುನ್ನೆಡೆಗೆ ಸಾಕಷ್ಟು ಶ್ರಮಿಸಿವೆ - ನೆರವು ನೀಡಿವೆ. ಅವರುಗಳಿಗೆಲ್ಲಾ ಸಂಸ್ಥೆ ಸದಾ ಚಿರಋಣಿಯಾಗಿದೆ.

ರಾಜ್ಯ ಸಂಸ್ಥೆಯ ಪ್ರತಿನಿಧಿಗಳಾಗಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಸಂಘಟಕರುಗಳ ಸಭೆಯನ್ನು ಈ ಸಾಲಿನಲ್ಲಿ ಮೂರು ಬಾರಿ ಕರೆದು ವಿವಿಧ ಹಂತಗಳಲ್ಲಿ ಅವರುಗಳು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಬಗ್ಗೆ ವಿವರವಾಗಿ ಚರ್ಚಿಸಿ, ಸಲಹೆ - ಮಾರ್ಗದರ್ಶನ ನೀಡಲಾಗಿದೆ. ವಿವಿಧ ಹಂತಗಳಲ್ಲಿ ನಾವುಗಳು ಹಾಕಿಕೊಂಡಿರುವ ಗುರಿ ಮುಟ್ಟುವ ಬಗ್ಗೆ ಸ್ಥಳೀಯ, ಜಿಲ್ಲಾ ಸಂಸ್ಥೆಗಳು ಸಂಪೂರ್ಣ ನೆರವಿನೊಂದಿಗೆ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆಯೂ ಸೂಚಿಸಲಾಗಿದೆ.

ಈ ಸಾಲಿನ ಜೂನ್ ತಿಂಗಳಲ್ಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಸನ್ಮಾನ್ಯ ಆಯುಕ್ತರು ಚಳವಳಿಯ ಬೆಳವಣಿಗೆ ಬಗ್ಗೆ ವಿವರವಾದ ಸುತ್ತೋಲೆ ನೀಡಿ - ದಳ / ಘಟಕಗಳ ನೊಂದಣಿ / ನವೀಕರಣ ಮಾಡಿ, ದಳಗಳನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ತೆರೆದು ಹೆಚ್ಚು ಮಕ್ಕಳನ್ನು ಚಳವಳಿಯ ಸದಸ್ಯರನ್ನಾಗಿ ಮಾಡುವ ಬಗ್ಗೆ ಸ್ಪಷ್ಟ ಆದೇಶ ನೀಡಿರುತ್ತಾರೆ. ಇದು ಚಳವಳಿಯ ಬೆಳವಣಿಗೆಗೆ ಎಲ್ಲ ದೃಷ್ಠಿಯಿಂದಲೂ ಹೆಚ್ಚಿನ ಶಕ್ತಿಯನ್ನು ತುಂಬಿದೆ. ತಾವುಗಳು ಈಗಾಗಲೇ ಆಯುಕ್ತರ ಸುತ್ತೋಲೆಯ ಸಹಾಯದಿಂದ ಚಳವಳಿಯನ್ನು ವಿವಿಧ ಹಂತಗಳಲ್ಲಿ ಬೆಳೆಸಲು ಸಾಕಷ್ಟು ಪ್ರಯತ್ನ ನಡೆಸಿರುವುದು ನನ್ನ ಗಮನಕ್ಕೆ ಬಂದಿದೆ.

ರಾಜ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿ - ವಿವಿಧ ಉಪ ಸಮಿತಿಗಳು - ಜಿಲ್ಲಾ ಆಯುಕ್ತರುಗಳ ಹಾಗೂ ಕಾರ್ಯದರ್ಶಿಗಳ ಸಮಾವೇಶ, ತರಬೇತಿ ನಾಯಕರುಗಳ ಹಾಗೂ ಜಿಲ್ಲೆಗಳಲ್ಲಿ ಕಾರ್ಯನಿರ್ವಸುತ್ತಿರುವ ಸಂಘಟಕರುಗಳ ಸಭೆಗಳಲ್ಲಿ ತೀರ್ಮಾನಿಸಿರುವಂತೆ, 2004-2005ನೇ ಸಾಲಿನಲ್ಲಿ

- ನಮ್ಮ ತರಬೇತಿಗಳು - ಕಾರ್ಯಕ್ರಮಗಳನ್ನು ಡಿಸೆಂಬರ್ 2004ರ ಅಂತ್ಯದಲ್ಲಿಯೇ ಮಾಡಿ ಮುಗಿಸಬೇಕಾಗಿದೆ. ಇದು ಸ್ಥಳೀಯ, ಜಿಲ್ಲೆ ಹಾಗೂ ರಾಜ್ಯ ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಆದುದರಿಂದ ನಾನು ರಾಜ್ಯ ಸಂಸ್ಥೆಯ ಪರವಾಗಿ ಚಳವಳಿಯ ವಿವಿಧ ಹಂತದ ಪದಾಧಿಕಾರಿಗಳು ಹಾಗೂ ಕ್ಷೇತ್ರ ಕಾರ್ಯಕರ್ತರುಗಳಲ್ಲಿ ಪ್ರಾರ್ಥಿಸುವುದೇನೆಂದರೆ, ತಾವುಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಂಡು 2004-2005ನೇ ಸಾಲಿನಲ್ಲಿ ನಿಮ್ಮ ಘಟಕ, ದಳಗಳ - ಸ್ಥಳೀಯ, ಜಿಲ್ಲಾ ಸಂಸ್ಥೆಗಳ ಕಾರ್ಯಕ್ರಮ, ತರಬೇತಿಗಳನ್ನು ಹೆಚ್ಚಿಸುವುದರೊಂದಿಗೆ ಚಳವಳಿಯ ವಿಚಾರ ತತ್ವ-ಚಿಂತನೆಗಳನ್ನು ಪ್ರಚಾರ ಪಡಿಸುವಲ್ಲಿ ತೊಡಗಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ತಮಗೆಲ್ಲಾ ತಿಳಿದಿರುವಂತೆ ಸ್ಕೌಟ್-ಗೈಡ್ ಚಳವಳಿಗೆ ವಿಶ್ವವ್ಯಾಪ್ತಿ ಇದೆ. ಅಂತರಿಕ ಕತೃತ್ವ ಶಕ್ತಿ ಇದೆ. ಯುವ ಜನಾಂಗದ ಸರ್ವಾಂಗೀಣ ಅಭಿವೃದ್ಧಿಯ ಮುನ್ನೋಟವಿದೆ. ಅವರಲ್ಲಿ ಆತ್ಮಶಕ್ತಿ ತುಂಬುವ ತರಬೇತಿ ಹಾಗೂ ವೈಚಾರಿಕತೆ ಇದೆ.

ಸಮಾಜ - ಸರ್ಕಾರ - ಸಮುದಾಯ ಈ ಚಳವಳಿಯಿಂದ ಸಾಕಷ್ಟು ನಿರೀಕ್ಷೆಗಳನ್ನು ಹೊಂದಿದೆ. ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್‌ಗಳನ್ನು ಹೊಂದಿರುವ ಸ್ಥಳಗಳಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮೀಣ ಹಂತದಲ್ಲಿ ಹಾಕಿಕೊಂಡು ರಸ್ತೆಗಳ ಅಭಿವೃದ್ಧಿ, ಚರಂಡಿಗಳ ನಿರ್ಮಾಣ, ಶಾಲೆಗಳ ಆವರಣದಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಮರ - ಗಿಡಗಳನ್ನು ಬೆಳೆಸುವುದು - ಆರೋಗ್ಯ ಹಾಗೂ ನೈರ್ಮಲ್ಯೀಕರಣಗಳ ಬಗ್ಗೆ ಮಾಹಿತಿ ನೀಡುವುದು, ಶಾಲೆಯಿಂದ ಹೊರಗುಳಿದಿರುವ ಮಗುವನ್ನು ಶಾಲೆಗೆ ಸೇರಿಸುವುದು - ಅನಕ್ಷರಸ್ಥರನ್ನು ಅಕ್ಷರಾಭ್ಯಾಸದತ್ತ ಕೊಂಡೊಯ್ಯುವ ಹತ್ತು ಹಲವಾರು ಉಪಯುಕ್ತ ಕಾರ್ಯಗಳನ್ನು ಈಗಾಗಲೇ ಮಾಡುತ್ತಿರುವ ಸಂಸ್ಥೆಯ ಆದರ್ಶಗಳನ್ನು ಫಲಪ್ರದಗೊಳಿಸುವಲ್ಲಿ ಮಾರ್ಗಸೂಚಿ ಹಾಕಿಕೊಂಡು ಕಾರ್ಯಪ್ರವತ್ತರಾಗಬೇಕಾಗಿ ಪ್ರಾರ್ಥಿಸುತ್ತೇನೆ.

ನೂತನ ತಾರಣ ನಾಮ ಸಂವತ್ಸರವು ನಾಡಿನಲ್ಲಿ ಸಕಲ ಸನ್ಮಂಗಳವನ್ನು ದಯಪಾಲಿಸುವುದರೊಂದಿಗೆ - ಮಳೆ - ಬೆಳೆ ವಿಪುಲವಾಗಿ ಆಗಿ, ನಾಡಿನಲ್ಲಿ ಶಾಂತಿ - ಸಮೃದ್ಧಿ - ಯಥೇಚ್ಛವಾಗಿ ಉಂಟಾಗಲೆಂದು ಹಾಗೂ ಚಳವಳಿಯ ಬೆಳವಣಿಗೆ ರಾಜ್ಯದಾದ್ಯಂತ ಹೆಚ್ಚಾಗಲೆಂದೂ ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ತಮ್ಮ ವಿಶ್ವಾಸಿ,

(ಕೊಂಡಜ್ಜಿ ಬ. ಷಣ್ಮುಖಪ್ಪ)

ಜಿಲ್ಲೆ ವಾರ್ತೆಗಳು

ಹಾವೇರಿ ಜಿಲ್ಲೆ

ಜಿಲ್ಲಾ ಮೇಳದ ಉದ್ಘಾಟನೆಯನ್ನು ಶ್ರೀ ಎಸ್.ಎಲ್. ಚವ್ಹಾಣ ಡಿ.ಡಿ.ಪಿ.ಐ. ಹಾಗೂ ಜಿಲ್ಲಾ ಸ್ಕೌಟ್ ಕಮೀಷನರ್, ಶ್ರೀ ಪ್ರಭಾಕರರಾವ್ ಮಂಗಳೂರ, ಡಿ.ಸಿ.ಸಿ. ಶ್ರೀಮತಿ ಮಾದುರಿ ದೇವಧರ, ಜಿಲ್ಲಾ ಗೈಡ್ ಕಮೀಷನರ್, ಶ್ರೀ ಎ.ಎಂ. ಅಕ್ಕಿ ಬಿ.ಇ.ಓ. ಮತ್ತು ಎ.ಡಿ.ಸಿ. ಹಾವೇರಿ, ಶ್ರೀ ಡಿ. ಪಾಲಾಕ್ಷಪ್ಪ ಜಿಲ್ಲಾ ಉಪಸಂಯೋಜನ ಅಧಿಕಾರಿ ಸರ್ವ ಶಿಕ್ಷಣ ಅಭಿಯಾನ ಹಾವೇರಿ, ಶ್ರೀ ಎಂ.ಆರ್. ಪಾಟೀಲ, ಶ್ರೀ ಎ.ಎಲ್. ಶೇಖಸೂರಣಗಿ. ಡಿ.ಓ.ಸಿ. ಅವರುಗಳನ್ನು ಚಿತ್ರದಲ್ಲಿ ಕಾಣಬಹುದು.

ಜಿಲ್ಲಾ ಪುರಸ್ಕಾರ ಪ್ರಧಾನ ಸಮಾರಂಭ ಹಾಗೂ ಜಿಲ್ಲಾ ಮಕ್ಕಳ ಮೇಳ

ದಿನಾಂಕ - 4.3.2004 ರಂದು ಶ್ರೀ ಎಸ್.ಎಲ್. ಚವ್ಹಾಣ, ಉಪನಿರ್ದೇಶಕರು ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಸ್ಕೌಟ್ ಕಮಿಷನರ್, ಹಾವೇರಿ ಇವರು ಜಿಲ್ಲಾ ಪುರಸ್ಕಾರ ಉದ್ಘಾಟನೆ ಮಾಡಿ ಜೂನ್ ತಿಂಗಳಲ್ಲಿ ಹೆಚ್ಚಿನ ರೀತಿ ಪ್ರತಿಯೊಂದು ತಾಲೂಕಿನಲ್ಲಿ ಕಡ್ಡಾಯವಾಗಿ ತರಬೇತಿ ನೀಡಿ ಶೇಕಡ 75ರಷ್ಟು ಸ್ಕೌಟ್ ಮತ್ತು ಗೈಡ್ ಸಂಖ್ಯೆ ಹೆಚ್ಚು ಮಾಡುತ್ತೇವೆ ಎಂದು ತಿಳಿಸಿದರು. ಶ್ರೀ ಎ.ಎಂ. ಅಕ್ಕಿ, ಬಿ.ಇ.ಓ. ಮತ್ತು ಎ.ಡಿ.ಸಿ., ಹಾವೇರಿ ಅವರು ಶಿಕ್ಷಣದಲ್ಲಿ ಶಿಸ್ತು ಮತ್ತು ಬುದ್ಧಿ ಮಟ್ಟ ಹಾಗೂ ಮಕ್ಕಳಲ್ಲಿ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾದರೆ ಶಿಸ್ತಿನಂತಹ ಸ್ಕೌಟ್ ಮತ್ತು ಗೈಡ್ ಸಂಸ್ಥೆ ಮುಖ್ಯ ಪಾತ್ರವಹಿಸುತ್ತದೆ ಎಂದು ತಿಳಿಸಿದರು. ಶ್ರೀ ಡಿ. ಫಾಲಾಕ್ಷಪ್ಪ, ಜಿಲ್ಲಾ ಉಪ ಸಂಯೋಜನಾಧಿಕಾರಿ, ಶಿಕ್ಷಣ ಇಲಾಖೆ, ಶ್ರೀ ಎಂ.ಹೆಚ್. ಖಾನ, ಬಿ.ಆರ್.ಸಿ. ಸಮನ್ವಯ ಅಧಿಕಾರಿ, ಶ್ರೀಮತಿ ಮಾಧುರಿ ದೇವಧರ ಜಿಲ್ಲಾ, ಗೈಡ್ ಕಮೀಷನರ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಪ್ರಭಾಕರ್‌ರಾವ್ ಮಂಗಳೂರ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು.

ದಿನಾಂಕ - 6.3.2004 ರಂದು ಜಿಲ್ಲಾ ಪುರಸ್ಕಾರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಪ್ರಶಸ್ತಿ ಪ್ರಧಾನ ಮಾಡಿದವರು ಮಾನ್ಯಶ್ರೀ ಸಂಜೀವ ಶೆಟ್ಟೆಣ್ಣನವರ, ಕೆ.ಎ.ಎಸ್., ಜಿಲ್ಲಾಧಿಕಾರಿಗಳು. ಜಿಲ್ಲಾ ಪುರಸ್ಕಾರ ಪ್ರಧಾನ ಮಾಡಿ ಈ ಸಂಸ್ಥೆ ಇಂದಿನ ಸಮಾಜಕ್ಕೆ ತಮ್ಮ ಬಾಳಿನಲ್ಲಿ ಉತ್ತಮ ನಾಗರಿಕತ್ವ ಜೀವನ ಹೇಗೆ ನಡೆಸಿಕೊಂಡು ಹೋಗಬೇಕು ಎಂಬುದನ್ನು ತಿಳಿಸುತ್ತದೆ. ಇಂತಹ ಸಂಸ್ಥೆ ಪಟ್ಟಣದಲ್ಲಿ ಅಷ್ಟೆ ಅಲ್ಲ ಪ್ರತಿಯೊಂದು ಗ್ರಾಮದಲ್ಲಿ ಹರಡಲಿ. ಜಿಲ್ಲಾಧಿಕಾರಿಗಳ ಕಛೇರಿಯಿಂದ ತಮಗೆ ಎಲ್ಲ ಸಹಕಾರವಿದೆ ಎಂದು ತಿಳಿಸಿದರು. ಶ್ರೀಮತಿ ಮಮತಾ ಶೆಟ್ಟೆಣ್ಣನವರ ಮಕ್ಕಳ ಬಾಲ್ಯ, ಅವರು ಸಮಾಜದಲ್ಲಿ ಎದುರಿಸಬೇಕಾದ ಕಷ್ಟ-ಸುಖ ಇವೆಲಕ್ಕೂ-ಧೈರ್ಯ ತುಂಬುವಂತಹ ಸಂಸ್ಥೆ ಇದು ಆಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಡಾ॥ ಸುಭಾಷಚಂದ್ರಶೆಟ್ಟಿ. ಡಿ.ಹೆಚ್.ಕ್ಯೂ., ಶ್ರೀ ಎಸ್.ಎಲ್. ಚವ್ಹಾಣ, ಡಿ.ಡಿ.ಪಿ.ಐ., ಶ್ರೀ ಎ.ಎಂ. ಅಕ್ಕಿ, ಬಿ.ಇ.ಓ., ಶ್ರೀ ಎಸ್.ವಿ. ಬಸೆಗಟ್ಟಿ, ಜೆ.ಪಿ. ರೋಟರಿ ಚೇರಮನ್ನರು, ಶ್ರೀ ಬಾರ್ಕಿ, ಬಿಸಿ ಊಟದ ನೊಡಲ್ ಅಧಿಕಾರಿ ಯಮನಕ್ಕನವರ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಕೆ.ಬಿ. ಹಿರೇಮಠ, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ,

ಡಿ.ಹೆಚ್.ಕ್ಯೂ., ಶ್ರೀ ಎಂ.ಬಿ. ಭಜಂತ್ರಿ, ಶಿಕ್ಷಣ ಸಂಯೋಜಕರು, ಶ್ರೀ ಎಸ್.ಆರ್. ಇನಾಮದಾರ ತಾಲೂಕ ಕಾರ್ಯದರ್ಶಿ ಅವರಿಗೆ ಹಾಗೂ ನಿವೃತ್ತಿ ಹೊಂದಿದವರಿಗೆ ಅಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಸನ್ಮಾನ ಮಾಡಿದರು.

ಜಿಲ್ಲಾ ಪುರಸ್ಕಾರ ಮತ್ತು ಜಿಲ್ಲಾ ಮೇಳದಲ್ಲಿ ಹಾವೇರಿ ಜಿಲ್ಲೆಯ ವಿವಿಧ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಿಂದ 190 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. 23 ಜನ ಸ್ಕೌಟ್ ಮಾಸ್ಟರ್‌ಗಳು, 12 ಜನ ಗೈಡ್ ಕ್ಯಾಪ್ಟನ್ನಗಳು ಭಾಗವಹಿಸಿದ್ದರು.

ಎಡದಿಂದ ಬಲಕ್ಕೆ :- ಡಾ|| ಸುಭಾಷಚಂದ್ರಶೆಟ್ಟಿ ಸ್ಥಾನಿಕ ಆಯುಕ್ತರು, ಶ್ರೀ ಎನ್.ಹೆಚ್. ಕಟಕಗೊಂಡ ಡಿ.ಡಿ.ಪಿ.ಐ. ಮತ್ತು ಡಿ.ಸಿ. (ಎಸ್) ಹಾವೇರಿ, ಶ್ರೀ ಎಸ್.ಸಿ. ಶಿಡೆನೂರ, ಅಧ್ಯಕ್ಷರು, ಜಿಲ್ಲಾ ಪಂಚಾಯತ್ (ನಿಂತವರು), ಶ್ರೀ ಆರ್. ರಂಗಾರಡ್ಡಿ, ಅಧ್ಯಕ್ಷರು, ಗ್ರಾಮ ಪಂಚಾಯಿತ್, ಇಟಗಿ, ಶ್ರೀ ಎಂ.ಡಿ. ಬಳ್ಳಾರಿ, ಬಿ.ಇ.ಓ. ಮತ್ತು ಎ.ಡಿ.ಸಿ., ರಾಣೆಬೆನ್ನೂರು

ಏಡ್ಸ್ ಜನಜಾಗೃತಾ ಆಂದೋಲನ

ದಿನಾಂಕ 11.02.2004ರ ಬುಧವಾರ ಇಟಗಿ ಪ್ರೌಢಶಾಲೆಯಲ್ಲಿ ನಡೆದ ಸಮಾರಂಭ ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಆರ್. ರಂಗಾರಡ್ಡಿ ಅಧ್ಯಕರು, ಗ್ರಾಮ ಪಂಚಾಯತ್, ಇಟಗಿ ಇವರು ವಹಿಸಿದ್ದರು. ಉದ್ಘಾಟನೆಯನ್ನು ಡಾ|| ಗೋಪಾಲ ನಾಯಕ, ಜಿಲ್ಲಾ ಆರೋಗ್ಯಾಧಿಕಾರಿಗಳು, ಹಾವೇರಿ ಇವರು ಮಾತನಾಡಿ ಇಂದಿನ ಜನಾಂಗರಕ್ಕೆ ಏಡ್ಸ್ ಜಾಗೃತಿ ಶಿಕ್ಷಣ ಅತಿ ಅವಶ್ಯಕ ಎಂದು ತಿಳಿಸಿದರು. ಮುಕ್ತಾಯ ಸಮಾರಂಭದಲ್ಲಿ ಮಾನ್ಯಶ್ರೀ ಎಸ್.ಸಿ. ಶಿಡೆನೂರ, ಅಧ್ಯಕ್ಷರು ಜಿಲ್ಲಾ ಪಂಚಾಯಿತ್, ಹಾವೇರಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಏಡ್ಸ್ ಬಗ್ಗೆ ಹಳ್ಳಿಗಳಲ್ಲಿ ಮನವರಿಕೆ ಮಾಡಿಕೊಡುವುದು ತುಂಬಾ ಅವಶ್ಯಕ ಎಂದು ತಿಳಿಸಿ ಜಿಲ್ಲಾ ಪಂಚಾಯಿತಿಯಿಂದ ಎಲ್ಲಾ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು. ಶ್ರೀ ಎನ್.ಹೆಚ್. ಕಟಕಗೊಂಡ, ಡಿ.ಡಿ.ಪಿ.ಐ. ಮತ್ತು ಡಿ.ಸಿ. (ಎಸ್) ಹಾವೇರಿ ಇವರು ಮಾತನಾಡಿ ಪ್ರತಿಯೊಂದು ಗ್ರಾಮದಲ್ಲಿ ಏಡ್ಸ್ ಕಾರ್ಯಕ್ರಮದಲ್ಲಿ ಜನ ಜಾಗೃತಿಯನ್ನು ಸ್ಕೌಟ್ ಮತ್ತು ಗೈಡ್ ಸಂಸ್ಥೆಯಿಂದ ಮಾಡುತ್ತೇವೆ ಎಂದು ತಿಳಿಸಿದರು. ಶ್ರೀ ಎಂ.ಡಿ. ರಾಮಲಿಂಗಣ್ಣನವರ, ಅಧ್ಯಕ್ಷರು ಬಾರ್ ಅಸೋಸಿಯೆಷನ್, ರಾಣೆಬೆನ್ನೂರು, ಡಾ|| ಸುಭಾಷ ಚಂದ್ರಶೆಟ್ಟಿ, ಹಾವೇರಿ ಇವರು ಏಡ್ಸ್ ರೋಗದ ಬಗ್ಗೆ ಉಪನ್ಯಾಸ ನೀಡಿದರು. ಊರಿನ ಎಲ್ಲಾ ಪ್ರಮುಖರು ಸುಮಾರು 500ಕ್ಕೂ ಹೆಚ್ಚು ಜನ ಸೇರಿದ್ದರು. 300 ಸ್ಕೌಟ್ ಮತ್ತು ಗೈಡ್ ಮಕ್ಕಳು ಇಟಗಿ ಗ್ರಾಮದ ಪ್ರೌಢ ಮತ್ತು ಪ್ರಾಥಮಿಕ ಶಾಲೆಯ ಎಲ್ಲಾ ಮಕ್ಕಳು ಭಾಗವಹಿಸಿದ್ದರು ಹಾಗೂ ಶ್ರೀ ಎಸ್.ಆರ್. ಇನಾಮದಾರ, ಕಾರ್ಯದರ್ಶಿ, ರಾಣೆಬೆನ್ನೂರ, ಶ್ರೀ ಇ.ಎಸ್. ಭಗವಂತಗೌಡ್ರ, ಖಜಾಂಜಿ, ಶ್ರೀ ಆರ್.ಡಿ. ಹೊಂಬರಡಿ, ಡಿ.ಓ.ಸಿ., ಶ್ರೀ ಎ.ಸಿ. ಶೇಖಸುರಣಗಿ ಭಾಗವಹಿಸಿದ್ದರು.

ರಾಯಚೂರು ಜಿಲ್ಲೆ

ಮಕ್ಕಳಲ್ಲಿ ಪ್ರಾರಂಭದ ಹಂತದಿಂದಲೇ ದೈಹಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ, ಬೆಳವಣಿಗೆಯನ್ನು ಪ್ರೋತ್ಸಾಹಿಸುವುದರಿಂದ ಅವರು ಮುಂದೆ ಸಮಾಜದಲ್ಲಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಲು ಸಾಧ್ಯ ಎಂದು ಹೋಟೆಲ್ ಉದ್ಯಮಿ ಶ್ರೀ ಸದಾನಂದ ಪ್ರಭುರವರು ಹೇಳಿದರು. ದಿನಾಂಕ 22.2.2004 ರಂದು ಅವರು

ಚಿಂತನ ದಿನಾಚರಣೆಯನ್ನು ಹೋಟಲ್ ಉದ್ಯಮಿಗಳಾದ ಶ್ರೀ ಸದಾನಂದ ಪ್ರಭು ಉದ್ಘಾಟಿಸುತ್ತಿರುವುದು. ಶ್ರೀ ಕೆ. ತಿಮ್ಮಯ್ಯ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎನ್. ನರಸಿಂಹಮೂರ್ತಿ, ಜಿಲ್ಲಾ ಆಯುಕ್ತರು (ಸ್ಕೌಟ್) ಹಾಗೂ ಶ್ರೀಮತಿ ಅಜೀಜ ಸುಲ್ತಾಲ ಕಾಣಬಹುದು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ ಜಿಲ್ಲಾ ಸಂಸ್ಥೆಯವರು ಏರ್ಪಡಿಸಿದ್ದ "ಚಿಂತನಾ ದಿನದ" ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ಅವರು ಮುಂದುವರೆದು ಆಕರ್ಷಕ, ಆನಂದದಾಯಕ ಮತ್ತು ಸ್ಕೌಟ್ಸ್, ಗೈಡ್ಸ್ ಭಾಷೆ ನಿಯಮಗಳ ಆಧಾರಿತ ನಾಯಕತ್ವದ ಮಾರ್ಗದರ್ಶನ, ಪ್ರಗತಿಪರತರಬೇತಿಯ ಚಟುವಟಿಕೆಗಳನ್ನು ರೂಪಿಸುವ ಮಾರ್ಗದಿಂದ ಶಿಕ್ಷಣದ ಗುರಿಯನ್ನು ತಲುಪಬಹುದೆಂದು ಒತ್ತಿ ಹೇಳಿದರು. ಸ್ವಾಮಿ ವಿವೇಕಾನಂದರು ಹೇಳಿದಂತೆ ಕೊಡುವುದರಿಂದ ಜೀವನದ ಅರ್ಥವನ್ನು ತಿಳಿದುಕೊಳ್ಳಬಹುದು. ಕೊಡುವುದರಿಂದ ಹತ್ತಿರದ ಸಂಬಂಧ ಬೆಳೆಯುತ್ತದೆ. ತೃಪ್ತಿ, ಸಂತೋಷ, ನಗು ಬೆಳೆಯುತ್ತದೆ. ಕೊಡುವುದು ಉಳಿಸಲಿಕ್ಕಾಗಿ, ಕೊಡುವುದನ್ನು ಕೊಡಿ ಅದನ್ನು ನೀವು ಮತ್ತೆ ಪಡೆಯುತ್ತೀರಿ ಎಂದು ಮಾರ್ಮಿಕವಾಗಿ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಭಾರತ್ ಸ್ಕೌಟ್ ಮತ್ತು ಗೈಡ್ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಕೆ. ತಿಮ್ಮಯ್ಯನವರು ಮಾತನಾಡಿ, ವೈಯುಕ್ತಿಕವಾಗಿ ಜವಾಬ್ದಾರಿಯುತ ಪ್ರಜೆಗಳಾಗಿ, ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮುದಾಯದ ಸದಸ್ಯರಾಗಿ, ತಮ್ಮಲ್ಲಿ ಅಡಗಿರುವ ಶಾರೀರಕ, ಸಾಮಾಜಿಕ ಹಾಗೂ ಪಾರಮಾರ್ಥಿಕ ಚೈತನ್ಯಗಳನ್ನು ಪೂರ್ಣವಾಗಿ ಹೊಂದುವುದರಲ್ಲಿ ಯುವ ಜನತೆಯ ಬೆಳವಣಿಗೆಗೆ ಸಹಕರಿಸುವುದೇ ಸ್ಕೌಟ್ ಮತ್ತು ಗೈಡಿನ ಮೂಲ ಉದ್ದೇಶವಾಗಿದೆ ಎಂದು ಹೇಳಿದರು.

ಪ್ರಾರಂಭದಲ್ಲಿ ಜಿಲ್ಲಾ ಸಂಸ್ಥೆಯ ಆಯುಕ್ತರಾದ ಶ್ರೀ ಎನ್. ನರಸಿಂಹಮೂರ್ತಿಯವರು ಎಲ್ಲರನ್ನೂ ಸ್ವಾಗತಿಸಿ ಬಿ.ಪಿ. ಯವರ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾದ ಶ್ರೀ ಸದಾನಂದ ಪ್ರಭುರವರು ಬಿ.ಪಿ. ಹಾಗೂ ಲೇಡಿ. ಬಿ.ಪಿ.ಯವರ ಭಾವಚಿತ್ರಗಳಿಗೆ ಹೂಮಾಲೆ ಹಾಕಿ ಜ್ಯೋತಿಯನ್ನು ಬೆಳಗಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಅಜೀಜಾಸುಲ್ತಾನ ಮಾಡಿದರು. ಕಾರ್ಯಕ್ರಮದ ಹೊಣೆಯನ್ನು ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಅಶೋಕರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಆರ್.ಎಸ್. ಸಾಗರ್, ರಾಜಾರಾಮ, ನಾಗರಾಜ, ಸ್ವಾಮಿ, ಶ್ರೀಮತಿ ಲಕ್ಷ್ಮಿ ಅನುರಾಧಾ, ಜೀನತ್ ಬೇಗಮ್ ಮೊದಲಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಹಿರಿಯ ಸ್ಕೌಟ್ ಮಾಸ್ಟರ್ ಶ್ರೀ ಜಿ.ಎನ್. ಕೃಷ್ಣಮೂರ್ತಿಯವರು ವಂದಿಸಿದರು.

ಹಾಸನ ಜಿಲ್ಲೆ

ಜಿಲ್ಲಾ ರ್‍ಯಾಲಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಹಾಸನ. ಜಿಲ್ಲಾ ಸ್ಕೌಟ್ ಭವನದಲ್ಲಿ ದಿನಾಂಕ 22.2.2004 ರಂದು ಸಂಸ್ಥಾಪಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ ರ್‍ಯಾಲಿ ಏರ್ಪಡಿಸಲಾಗಿತ್ತು. ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ



ನಗರಸಭಾಧ್ಯಕ್ಷರಾದ ಶ್ರೀ ಜೆ.ಬಿ. ಕುಮಾರ್, ಶ್ರೀಮತಿ ವೀಣಾ ಆರ್. ನಾಯಕ್, ಡಿಡಿಪಿಐ, ಶ್ರೀ ಚನ್ನವೀರಪ್ಪ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಪ್ರಾಶುಂಪಾಲರು ಡಯಟ್ ಅವರುಗಳನ್ನು ಕಾಣಬಹುದು.

ಮುಖ್ಯ ಆಯುಕ್ತರಾದ ಜಿಲ್ಲಾ ಡಯಟ್ ಉಪನಿರ್ದೇಶಕ (ಅಭಿವೃದ್ಧಿ) ಶ್ರೀ ವಿ. ಚನ್ನವೀರಪ್ಪರವರು ಅಧ್ಯಕ್ಷತೆ ವಹಿಸಿದ್ದರು. ಪ್ರಾಸ್ತಾವಿಕ ಭಾಷಣವನ್ನು ಶ್ರೀ ಮುತ್ತೇಗೌಡ, ಹೆಚ್.ಡಬ್ಲ್ಯೂ.ಬಿ. ಇವರು ಮಾಡಿದರು. ವೇದಿಕೆಯಲ್ಲಿ ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ರೇಣುಕಾಪ್ರಭು, ಶ್ರೀಮತಿ ವೀಣಾ ಆರ್. ನಾಯಕ್ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಶ್ರೀ ಕೆ. ಶಿವೇಗೌಡ, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಹಾಗೂ ಶ್ರೀಮತಿ ಕೈಷರ್ ಶರೀಫ್, ಎ.ಡಿ.ಸಿ. (ಗೈಡ್ಸ್), ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ವಿ. ರಮೇಶ್ ಉಪಸ್ಥಿತರಿದ್ದರು.

ರ್‍ಯಾಲಿಯನ್ನು ಜ್ಯೋತಿ ಬೆಳಗುವುದರ ಮೂಲಕ ನಗರ ಸಭೆ ಅಧ್ಯಕ್ಷರಾದ ಶ್ರೀ ಜೆ.ಬಿ. ಕುಮಾರ್ ಉದ್ಘಾಟಿಸಿ ಮಾತನಾಡುತ್ತಾ ಈ ಸಂಸ್ಥೆಗೆ ನಾವು ನಗರಸಭೆ ಕಡೆಯಿಂದ ಬೋರ್‌ವೆಲ್ ಹಾಕಿಸಿಕೊಡುತ್ತೇವೆ ಎಂದು ತಿಳಿಸಿದರು. ಇಂತಹ ಚಟುವಟಿಕೆ ಕಾರ್ಯಕ್ರಮ ಇನ್ನು ಹೆಚ್ಚುಹೆಚ್ಚಾಗಿ ನಡೆಯಬೇಕು ಎಂದು ತಿಳಿಸಿದರು. ಶ್ರೀ ಕೆ.ವಿ. ಉಮೇಶ್, ಡಿ.ಟಿ.ಸಿ. (ಸ್ಕೌಟ್ಸ್) ಇವರು ಎಲ್ಲರನ್ನೂ ಸ್ವಾಗತಿಸಿದರು. ನಿರೂಪಣೆಯನ್ನು ಶ್ರೀ ಎಂ.ಎಸ್. ಪ್ರಕಾಶ್ ಮಾಡಿದರು. ಮತ್ತು ಶ್ರೀ ಎ.ವಿ. ರಮೇಶ್, ಜಿಲ್ಲಾ ಕಾರ್ಯದರ್ಶಿ ಎಲ್ಲರನ್ನೂ ವಂದಿಸಿದರು.

ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು.

ಧ್ವಜಸ್ಥಂಭ ನಿರ್ಮಾಣ, ಸುಧಾರಿತ ಗುಡಾರ ನಿರ್ಮಾಣ, ಬೆಂಕಿ ಇಲ್ಲದೆ ಅಡುಗೆ ತಯಾರಿ, ಕರಕುಶಲ ವಸ್ತುಗಳ ತಯಾರಿ ಹಾಗೂ ಪ್ರದರ್ಶನ ಸ್ಪರ್ಧೆಗಳನ್ನು ನಡೆಸಲಾಯಿತು. ಕಬ್ಸ್, ಬಲ್‌ಬುಲ್‌ಗಳಿಗೆ ಅಡುಗೆ ತಯಾರಿ, ಗಾಳಿ ಪಟ ತಯಾರಿ, ಬುಲ್‌ಬುಲ್ ಟ್ರೀ ಹಾಗೂ ವಸ್ತು ಪ್ರದರ್ಶನ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ರೇಣುಕ ಪ್ರಭು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮಂಜಣ್ಣ ನಗರಸಭೆ ಸದಸ್ಯರು ಹಾಗೂ ಸಿ.ಆರ್.ಸಿ. ಶ್ರೀ ಸಿದ್ದೇಶರವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ರ್‍ಯಾಲಿಯಲ್ಲಿ ಭಾಗವಹಿಸಿದ ಎಲ್ಲಾ ಶಾಲೆಗಳಿಗೆ ನೆನಪಿನ ಕಾಣಿಕೆಗಳನ್ನು ನೀಡಲಾಯಿತು.

645 ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ ಹಾಗೂ 100 ಜನ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್‌ಗಳು ಭಾಗವಹಿಸಿದ್ದರು. ರಾಷ್ಟ್ರಗೀತೆಯೊಂದಿಗೆ ರ್‍ಯಾಲಿ ಮುಕ್ತಾಯವಾಯಿತು.

ದಾವಣಗೆರೆ ಜಿಲ್ಲೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ದಿನಾಂಕ 22.2.2004 ರಂದು ಜಿಲ್ಲಾ ಮಟ್ಟದ ಸ್ಕೌಟ್ಸ್, ಗೈಡ್ಸ್ ಮೇಳ, ಜಿಲ್ಲಾ ಪುರಸ್ಕಾರ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ಬೇಡನ್ ಪಾವೆಲ್ ಜನ್ಮ ದಿನಾಚರಣೆಯನ್ನು ಧ.ರಾ.ಮ. ಸ್ಕೌಟ್ ಭವನದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಶಿಬಿರದಲ್ಲಿ ಜಿಲ್ಲಾದ್ಯಂತ 450 ಕಬ್ಸ್ ಬುಲ್‌ಬುಲ್

ಪಥ ಸಂಚಲನ ಕಾರ್ಯಕ್ರಮದಲ್ಲಿ ಶ್ರೀ ಜೆಂಬಗಿ ಶರಣಪ್ಪ, ಜಿಲ್ಲಾ ಮುಖ್ಯ ಆಯುಕ್ತರು, ಸ್ಥಾನಿಕ ಆಯುಕ್ತ ಶ್ರೀ ಮಹಮದ್ ವಾಸಿಲ್, ಶ್ರೀ ಮುರುಘರಾಜೇಂದ್ರ ಚಿಗಟೇರಿ, ಜಿಲ್ಲಾ ಆಯುಕ್ತರು (ಸ್ಕೌಟ್) ದಳ ನಾಯಕರುಗಳು ಮತ್ತು ಸ್ಕೌಟ್ಸ್ - ಗೈಡ್ಸ್‌ಗಳನ್ನು

ನಂತರ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ತಾರಾ ಸ್ಟೋರಿ, ಜಂಗಲ್ ಸ್ಟೋರಿ, ಕರಕುಶಲ ವಸ್ತು ತಯಾರಿಕೆಯ ಸ್ಪರ್ಧೆಗಳನ್ನು ನಡೆಸಲಾಯಿತು.

ಸಂಜೆ 4.30ಕ್ಕೆ ಶ್ರೀ ಜೆಂಬಗಿ ಶರಣಪ್ಪ, ಜಿಲ್ಲಾ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಸಮಾರಂಭ ನಡೆಯಿತು. ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಜಿ.ಎಂ. ಶರಣಯ್ಯ ಇವರಿಗೆ ಉತ್ತಮ ಶಿಕ್ಷಕ ಅವಾರ್ಡ್ ಪಡೆದದ್ದಕ್ಕಾಗಿ ಸನ್ಮಾನಿಸಲಾಯಿತು. ಶ್ರೀ ಮಹಮದ್ ವಾಸಿಲ್, ಶ್ರೀ ಮುರುಘ ರಾಜೇಂದ್ರ ಚಿಗಟೇರಿ, ಶ್ರೀ ಷಡಾಕ್ಷರಪ್ಪ, ಶ್ರೀ ಎಂ.ಪಿ. ಚಂದ್ರಪ್ಪ, ಶ್ರೀ ವೈ. ಚನ್ನಬಸಪ್ಪ, ಶ್ರೀಮತಿ ಸಿ. ಮಂಜುಳ, ಶ್ರೀಮತಿ ವಿಜಯಲಕ್ಷ್ಮಿ ರೋವರ್ಸ್, ರೇಂಜರ್ಸ್, ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್‌ಗಳ ಸಹಕಾರದೊಂದಿಗೆ ರ್ಯಾಲಿಯು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಸ್ಕೌಟ್ಸ್, ಗೈಡ್ಸ್‌ಗಳು ಭಾಗವಹಿಸಿದ್ದರು. ರ್ಯಾಲಿಯ ನೇತೃತ್ವವನ್ನು ಶ್ರೀ ಮಹಮದ್ ವಾಸಿಲ್ ಎಲ್.ಟಿ.(ಎಸ್) ಇವರು ವಹಿಸಿದ್ದರು. ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ನಗರದ ಪ್ರಮುಖ ಬೀದಿಗಳಲ್ಲಿ ಬೇಡನ್ ಪಾವೆಲ್ ದಂಪತಿಗಳ ಫೋಟೋದೊಂದಿಗೆ ಶಿಸ್ತಿನಿಂದ ಪಥ ಸಂಚಲನ ನಡೆಸಲಾಯಿತು.

ಚನ್ನರಾಯಪಟ್ಟಣ ತಾಲ್ಲೂಕು ಮಟ್ಟದ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್ ರ್ಯಾಲಿ

ಶ್ರವಣ ಬೆಳಗೊಳದ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾ ಸ್ವಾಮೀಜಿಯವರು ಮೇಳವನ್ನು ಉದ್ಘಾಟಿಸಿ ಆಶೀರ್ವಚನ ಮಾಡುತ್ತಿರುವುದು.

ಸ್ಕೌಟ್ಸ್ ಮತ್ತು ಗೈಡ್ಸ್ ತಾಲ್ಲೂಕು ಸಂಸ್ಥೆ ಚನ್ನರಾಯಪಟ್ಟಣ ಮತ್ತು ಶ್ರೀ ಅಂಬಿಕಾ ವಿದ್ಯಾಲಯ ಶ್ರವಣಬೆಳೆಗೊಳ ಇದರ ಸಂಯುಕ್ತಾಶ್ರಯದಲ್ಲಿ ದಿನಾಂಕ : 28.01.2004 ರಂದು ತಾಲ್ಲೂಕು ಮಟ್ಟದ ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ಸ್ ರ್‍ಯಾಲಿಯು ಶ್ರೀ ಅಂಬಿಕಾ ವಿದ್ಯಾನಿಲಯದ ಆವರಣದಲ್ಲಿ ಏರ್ಪಡಿಸಲಾಗಿತ್ತು. ಪೂರ್ವಾಹ್ನ ಧ್ವಜಾರೋಹಣ ನೆರವೇರಿಸಿ ಪಟ್ಟಣದ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ರೇಣುಕಾಪ್ರಭುರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹೆಚ್.ಎಂ. ಗೌಡಯ್ಯ ಪ್ರಾಸ್ತಾವಿಕ ಭಾಷಣ ಮಾಡಿದರು. ವೇದಿಕೆಯಲ್ಲಿ ಜಿಲ್ಲಾ ಸಹಾಯಕ ಆಯುಕ್ತೆ ಶ್ರೀಮತಿ ಲೀಲಾಸ್ವರೂಪ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀ ಒ. ಮಂಜಪ್ಪ, ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಎ.ಎಲ್. ನಾಗೇಶ್, ಅಂಬಿಕಾ ಸಂಸ್ಥೆ ಕಾರ್ಯದರ್ಶಿ ಶ್ರೀ ಜೀವರಾಜ್, ಶ್ರೀ ಜಿನದತ್ತರಾಯ, ಶ್ರೀ ಕೆ.ಸಿ. ರಾಜಣ್ಣ ಉಪಸ್ಥಿತರಿದ್ದರು. ರ್‍ಯಾಲಿಯನ್ನು ಜ್ಯೋತಿ ಬೆಳಗುವುದರ ಮೂಲಕ ಶ್ರವಣಬೆಳಗೊಳ ಮಠದ ಸ್ವಸ್ತಿ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಉದ್ಘಾಟಿಸಿ ಆಶೀರ್ವಚನ ಮಾಡಿದರು.

ಸಾಯಂಕಾಲ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎಸ್. ಜಯಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ, ಪ್ರಶಸ್ತಿ ಪತ್ರಗಳನ್ನು ಹಾಗೂ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ರ್‍ಯಾಲಿಯನ್ನು ನಡೆಸಿಕೊಟ್ಟ ಶ್ರೀ ಅಂಬಿಕಾ ವಿದ್ಯಾಲಯದ ಮುಖ್ಯೋಪಾಧ್ಯಾಯರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ತುಮಕೂರು ಜಿಲ್ಲೆ

ಶಿರಾ ತಾಲ್ಲೂಕ್ ಸ್ಕೌಟ್ಸ್, ಗೈಡ್ಸ್ ರ್‍ಯಾಲಿ

ದಿನಾಂಕ 6.3.2004ರ ಶನಿವಾರ ಒಂದು ದಿನದ ತಾಲ್ಲೂಕ್ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ಸ್, ಬುಲ್‌ಬುಲ್ ಮೇಳವನ್ನು ಆಯೋಜಿಸಲಾಗಿತ್ತು. ಮೇಳದಲ್ಲಿ 304 ಮಕ್ಕಳು ಮತ್ತು 30 ಸ್ಕೌಟರ್ಸ್, ಗೈಡರ್ಸ್‌ಗಳು ಭಾಗವಹಿಸಿದ್ದರು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ರಂಗನಾಥಗೌಡರು ಉಪಸ್ಥಿತರಿದ್ದರು. ಉದ್ಘಾಟನಾ ಭಾಷಣವನ್ನು ಉಪನ್ಯಾಸಕರಾದ ಶ್ರೀ ಮಹೇಂದ್ರಪ್ಪನವರು ನಡೆಸಿಕೊಟ್ಟರು. ಮಕ್ಕಳು ದೇಶದ ಸಂಪತ್ತು. ಒಳ್ಳೆಯ ವಿಷಯಗಳು ಯಾವ ಕಡೆಯಿಂದ ಬಂದರೂ

ದಿನಾಂಕ 24.2.2004 ಮತ್ತು 25.02.2004ರಂದು ಸ.ಮಾ.ಬಾ.ಶಾಲೆ, ಮಧುಗಿರಿಯಲ್ಲಿ ನಡೆದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯು ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ರ್‍ಯಾಲಿಯನ್ನು ಸ್ಥಳೀಯ ಸಂಸ್ಥೆಯು ಉಪಾಧ್ಯಕ್ಷರಾದ ಹಾಗು ಮಾಜಿ ಪುರಸಭೆ ಅಧ್ಯಕ್ಷರಾದ ಶ್ರೀ ಡಿ.ಜಿ. ಶಂಕರನಾರಾಯಣ್, ಉದ್ಘಾಟಿಸಿದರು ಚಿತ್ರದಲ್ಲಿ ಮಾಜಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಗೌರಮ್ಮ ಪಂಚಾಕ್ಷರಯ್ಯ, ಶ್ರೀಮತಿ ಇಂದಿರಮ್ಮ ಶ್ರೀ ಹೆಚ್.ಕೆ. ನಂಜುಂಡಯ್ಯ ಉಪನಿರ್ದೇಶಕರಾದ ಶ್ರೀ ಖಲೀಲ್ ಅಹಮದ್ ಪರೀಷ್ , ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ.ವಿ. ರಾಜಣ್ಣ ಪ್ರಾ.ಶಾ.ಶಿ. ತಾಲ್ಲೂಕು ಸಂಘದ ಅಧ್ಯಕ್ಷ ಶ್ರೀ ಪುಟ್ಟೇಗೌಡ ಎ.ಡಿ.ಸಿ.(ಎಸ್) ಶ್ರೀ ಪಿ.ಎಂ. ಉಮೇಶ್ ಅವರುಗಳನ್ನು ಕಾಣಬಹುದು.

ಸ್ವಾಗತಿಸೋಣ. ಮಕ್ಕಳಲ್ಲಿ ಶ್ರದ್ಧೆಯನ್ನು ಬೆಳೆಸುವ ಸಮರ್ಥತೆ ಸ್ಕೌಟ್ಸ್, ಗೈಡ್ಸ್ ಸಂಸ್ಥೆಗೆ ಇದೆ. ಚಳವಳಿ ತಾಲ್ಲೂಕಿನಲ್ಲಿ ಹೆಚ್ಚಲಿ ಎಂದು ಆಶಿಸಿದರು.

ಮುಖ್ಯ ಅತಿಥಿಯಾಗಿ ಈ ಸಂಸ್ಥೆ ಗಣನೀಯವಾಗಿ ಬೆಳೆಯುತ್ತಿದ್ದು ಈ ನಿಟ್ಟಿನಲ್ಲಿ ದುಡಿಯುತ್ತಿರುವ ಎಲ್ಲರನ್ನೂ ಅಭಿನಂದಿಸಿದರು. ರ್‍ಯಾಲಿಯ ಅಂಗವಾಗಿ ಸ್ಕೌಟ್ಸ್ ಗೈಡ್ಸ್ ಕೈಪಿಡಿಯನ್ನು ಶ್ರೀ ಅಶೋಕಕುಮಾರ್‌ರವರು ಬಿಡುಗಡೆ ಮಾಡಿದರು. ಕೈಪಿಡಿಯ ಪರಿಚಯುವನ್ನು ಮತ್ತು ಉದ್ದೇಶವನ್ನು ಸ್ಕೌಟ್ಸ್ ಮಾಸ್ಟರ್ ಹಾಗು ತಾಲ್ಲೂಕ್ ಎ.ಡಿ.ಸಿ. ಶ್ರೀಪಾತಲಿಂಗಯ್ಯ ಇವರು ನಡೆಸಿಕೊಟ್ಟರು.

ಉಪತಹಸೀಲ್ದಾರ್ ಶ್ರೀ ಹನುಮಂತರಾಯಪ್ಪ ಇವರು ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಧ್ಯೇಯಗಳ ಬಗ್ಗೆ ತಿಳಿಸಿ, ಇವುಗಳನ್ನು ಮಕ್ಕಳು ಅನುಸರಿಸಿ ಉತ್ತಮ ಪ್ರಜೆಗಳಾಗಲಿ ಎಂದು ಹರಸಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಅಶೋಕ್‌ಕುಮಾರ್, ಉಪಾಧ್ಯಕ್ಷರು ಬಿ.ಎಸ್.ಜಿ. ಸಿರಾ ಹಾಗು ಉಪನ್ಯಾಸಕರು ಮಾತನಾಡುತ್ತಾ ಸ್ಕೌಟ್ ಮಿತವ್ಯಯಿ ಹಾಗು ಧೈರ್ಯವಂತನಾಗಿದ್ದು ಈ ಗುಣಗಳನ್ನು ಅಳವಡಿಸಿಕೊಂಡು ಹಂತ ಹಂತವಾಗಿ ಮುಂದುವರೆಯ ಬೇಕು ಎಂದು ಆಶಿಸಿದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಶ್ರೀ ಟಿ. ಗೋವಿಂದಯ್ಯನರು ಮಕ್ಕಳು ಹಿರಿಯರ ದಾರಿ ಅನುಸರಿಸುತ್ತಾ ವಿಧೇಯರಾಗಿ ಉತ್ತಮ ಪ್ರಜೆಗಳಾಗಬೇಕು ಎಂದರು.

ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನದಿಂದ ಶ್ರೀ ಬಿ. ಗೋವಿಂದಪ್ಪ ಇವರು ಮಾತನಾಡುತ್ತಾ ಗುರು ಶಿಷ್ಯರ ಸಂಬಂಧ ಚೆನ್ನಾಗಿ ಇರಬೇಕು. ಹಿರಿಯರು ಹೇಳುವುದನ್ನು ಚಿಕ್ಕವರಾದ ನೀವು ಅನುಸರಿಸಿದರೆ ನಮ್ಮ ಹಾಗೆ ನೀವು ಸಹ ಇಂತಹ ವೇದಿಕೆಗಳಲ್ಲಿ ಮಾತನಾಡುವ ಅವಕಾಶ ಬರುತ್ತದೆ. ನಿಮಗೆಲ್ಲಾ ಒಳ್ಳೆಯದಾಗಲಿ ಎಂದು ನುಡಿದರು. ಕಾರ್ಯದರ್ಶಿ ಶ್ರೀ ಕೆ.ಹೆಚ್. ಹನುಮಂತರಾಯ ಸ್ವಾಗತಿಸಿದರು. ಖಜಾಂಚಿ ಶ್ರೀ ಜಿ. ರಾಮಚಂದ್ರಯ್ಯ ಸರ್ವರನ್ನೂ ವಂದಿಸಿದರು. ಶ್ರೀ ಕದುರಯ್ಯ ಕಾರ್ಯಕ್ರಮ ನಿರೂಪಿಸಿದರು. ಮೇಳದ ಅಂಗವಾಗಿ ಮಕ್ಕಳಿಗೆ ಕ್ವಿಜ್, ಸಿಂಗ್-ಸಾಂಗ್ ಮತ್ತು ಸ್ಕೌಟ್ಸ್ ಗಂಟುಗಳು ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಚಿಕ್ಕಮಗಳೂರು ಜಿಲ್ಲೆ

ಕೊಪ್ಪ ತಾಲ್ಲೂಕ್ ಹರಿಹರಪುರದಲ್ಲಿ ತಾಲೂಕ್ ಮಟ್ಟದ ಸ್ಕೌಟ್ಸ್-ಗೈಡ್ಸ್, ಕಬ್ಸ್, ಬುಲ್‌ಬುಲ್ಸ್ ರ್‍ಯಾಲಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಪ್ಪ ತಾಲ್ಲೋಕ್ ಸ್ಥಳೀಯ ಸಂಸ್ಥೆಯ ವತಿಯಿಂದ ಹಾಗೂ ಲಯನ್ಸ್ - ಲಯನೆಸ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ದಿನಾಂಕ 13.2.2004 ರಂದು ಕೊಪ್ಪ ತಾಲೂಕ್ ಹರಿಹರಪುರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕ್ ಮಟ್ಟದ ಸ್ಕೌಟ್ಸ್ - ಗೈಡ್ಸ್, ಕಬ್ಸ್ - ಬುಲ್‌ಬುಲ್ಸ್ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು.

ತಾಲ್ಲೂಕಿನಾದ್ಯಂತ 300 ಸ್ಕೌಟ್ಸ್-ಗೈಡ್ಸ್, ಕಬ್ಸ್ - ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು. ರ್‍ಯಾಲಿಯ ಉದ್ಘಾಟನೆಯನ್ನು ಶ್ರೀಮತಿ ಸುಮಿತ್ರ ನಾರಾಯಣ ಅಧ್ಯಕ್ಷರು, ಗ್ರಾಮ ಪಂಚಾಯ್ತಿ, ಹರಿಹರಪುರ ಇವರು ನೆರವೇರಿಸಿ ಸ್ಕೌಟ್ ಸಂಸ್ಥೆಯ ಚಟುವಟಿಕೆಗಳು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೆಚ್ಚು ವಿಸ್ತಾರವಾಗಬೇಕೆಂದು ಕರೆನೀಡಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಕೆ.ಎಂ. ಗೋಪಾಲಕೃಷ್ಣ ಸಂಯೋಜಕರು, ದೈಹಿಕ ಶಿಕ್ಷಣ, ಬಿ.ಇ.ಓ. ಕಛೇರಿ ಕೊಪ್ಪ ಇವರು ಆಗಮಿಸಿದ್ದರು. ಶ್ರೀ ವಸಂತ ಆಜೀಲರು, ಅಧ್ಯಕ್ಷರು ಕೊಪ್ಪ ತಾಲೂಕ್ ಭಾರತ್ ಸ್ಕೌಟ್ಸ್-ಗೈಡ್ಸ್ ಇವರು ಸಮಾರಂಭದಲ್ಲಿ ಉಪಸ್ಥಿತರಿದ್ದು, ಸ್ಕೌಟ್-ಗೈಡ್ಸ್ ತರಬೇತಿ ಪಡೆದ ಎಲ್ಲಾ ಶಿಕ್ಷಕರು ಶಾಲೆಗಳಲ್ಲಿ ದಳ ನಡೆಸಿ ಮಕ್ಕಳಿಗೆ ತರಬೇತಿ ನೀಡಬೇಕೆಂದು ಕರೆನೀಡಿದರು.

ಸಮಾರಂಭದಲ್ಲಿ ಶ್ರೀಮತಿ ಶೈಲಾ, ಲಯನೆಸ್ ಕ್ಲಬ್

ಅಧ್ಯಕ್ಷರು, ಸಿಸ್ಟರ್ ಸಿಂಥಿಯಾ, ಎಲ್.ಟಿ.(ಜಿ) ಮತ್ತು ಡಿ.ಟಿ.ಸಿ., ಶ್ರೀ ಎಲ್.ಟಿ. ಲೋಕೇಶ್, ಎ.ಎಸ್.ಓ.ಸಿ. ಇವರು ಉಪಸ್ಥಿತರಿದ್ದರು.

ಸ್ಕೌಟ್ಸ್ ಗೈಡ್ಸ್ ಸಂಸ್ಥಾಪಕರ ದಿನಾಚರಣೆ ಮತ್ತು ತಾಲ್ಲೂಕು ಮೇಳ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಚಿಕ್ಕಮಗಳೂರು ವತಿಯಿಂದ ದಿನಾಂಕ 22.2.2004 ರಂದು ಭಾನುವಾರ ಸುಭಾಷ್ ಚಂದ್ರಬೋಸ್ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಸ್ಥಾಪಕರ ದಿನಾಚರಣೆ ಹಾಗೂ ತಾಲ್ಲೂಕು ಮೇಳವನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆ 10-00 ಗಂಟೆಗೆ ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಎಂ.ಎಸ್. ಷಡಾಕ್ಷರಿಯವರ ಅಧ್ಯಕ್ಷತೆಯಲ್ಲಿ, ನಗರ ಸಭೆ ಉಪಾಧ್ಯಕ್ಷರಾದ ಶ್ರೀ ಹೆಚ್.ಡಿ. ತಮ್ಮಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ತಾಲ್ಲೂಕು ದೈಹಿಕ ಶಿಕ್ಷಣ ಅಧೀಕ್ಷಕರಾದ ಶ್ರೀ ಕೆ.ಎಂ. ರಾಮಚಂದ್ರರವರು, ಸ್ಕೌಟ್ಸ್, ಗೈಡ್ಸ್ ಧ್ಯೇಯವನ್ನು ಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ.ಎಸ್. ಷಡಾಕ್ಷರಿಯವರು ಲಾರ್ಡ್ ಬೇಡನ್ ಪೋವೆಲ್‌ರವರ ಜೀವನ ಚರಿತ್ರೆ ಬಗ್ಗೆ ವಿವರಿಸಿದರು.

ತರೀಕೆರೆಯಲ್ಲಿ ಸ್ಕೌಟ್ಸ್-ಗೈಡ್ಸ್, ಕಬ್ಸ್ ಬುಲ್‌ಬುಲ್ಸ್ ರ‍್ಯಾಲಿ

ದಿನಾಂಕ 25-2-2004 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ತರೀಕೆರೆ ಸ್ಥಳೀಯ ಸಂಸ್ಥೆಯ ವತಿಯಿಂದ ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್ಸ್‌ಗಳ ರ‍್ಯಾಲಿಯನ್ನು ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಲಾಗಿತ್ತು.

ತರೀಕೆರೆ ತಾಲ್ಲೋಕಿನಾದ್ಯಂತ 300 ಸ್ಕೌಟ್ಸ್ - ಗೈಡ್ಸ್, ಕಬ್ಸ್ - ಬುಲ್‌ಬುಲ್ಸ್ ಗಳು ಭಾಗವಹಿಸಿದ್ದರು. ರ‍್ಯಾಲಿಯ ಉದ್ಘಾಟನೆಯನ್ನು ಶ್ರೀ ಪಾಂಡುರಂಗ, ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಆರ್. ಎಲ್. ಶ್ರೀನಿವಾಸ್, ಅಧ್ಯಕ್ಷರು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸ್ಥಳೀಯ ಸಂಸ್ಥೆ ಇವರು ಮಾತನಾಡುತ್ತ ಮಕ್ಕಳು ಸಂಸ್ಥೆಯ ತತ್ವಗಳನ್ನು ಪಾಲಿಸಿ ಉತ್ತಮ ನಾಗರೀಕರಾಗಬೇಕೆಂದು ಕರೆ ನೀಡಿದರು. ಶ್ರೀ ಕೆ. ವೀರಭದ್ರಪ್ಪ, ದೈಹಿಕ ಶಿಕ್ಷಣಾಧಿಕಾರಿಗಳು ತರೀಕೆರೆ ಇವರು ಸ್ಕೌಟ್ಸ್ - ಗೈಡ್ಸ್ ಸಂಸ್ಥಾಪಕರ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಶ್ರೀ ಎಲ್. ಜಯಪ್ಪ, ಸಮನ್ವಯಾಧಿಕಾರಿಗಳು ಉಪಸ್ಥಿತರಿದ್ದು, ಎಲ್ಲ ಶಾಲೆಗಳಲ್ಲಿ ಸಂಸ್ಥೆಯ ವಿಭಾಗಗಳನ್ನು ಪ್ರಾರಂಭಿಸಲು ಶ್ರಮಿಸುವುದಾಗಿ ತಿಳಿಸಿದರು. ರೆವರೆಂಡ್ ಫಾದರ್, ಐವಲೀನ ಅಮನ್ನರವರು ಸ್ಕೌಟ್ಸ್‌ನಲ್ಲಿ ಶಿಸ್ತು, ದೇಶಾಭಿಮಾನ, ಇತರರಿಗೆ ಸಹಾಯ ಮಾಡುವುದು ಪರೋಪಕಾರ ಗುಣಗಳನ್ನು ಬೆಳೆಸುವ ಸಂಸ್ಥೆಯಾಗಿದ್ದು ಇದನ್ನು ಎಲ್ಲರೂ ಪಾಲಿಸಬೇಕೆಂದು ಕರೆ ನೀಡಿದರು. ಶ್ರೀ ಮೋಹನ ಕುಮಾರ್, ಮುಖ್ಯೋಪಾಧ್ಯಾಯರು, ಶ್ರೀಧರ್, ಪುರಸಭಾ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದು ರ‍್ಯಾಲಿಯು ಯಶಸ್ವಿಯಾಗಲೆಂದು ಆಶಿಸಿದರು. ಶ್ರೀ ಎಲ್.ಟಿ. ಲೋಕೇಶ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು, ಚಿಕ್ಕಮಗಳೂರು ಇವರು ಉಪಸ್ಥಿತರಿದ್ದು. ರ‍್ಯಾಲಿಯ ಉದ್ದೇಶ ಹಾಗೂ ಸ್ಕೌಟಿಂಗ್‌ನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಶ್ರೀಮತಿ ಕಮಲಮ್ಮ ಸರ್ವರನ್ನು ಸ್ವಾಗತಿಸಿದರು. ಶ್ರೀಮತಿ ಮಂಜುಳ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ನಾಗರತ್ನಮ್ಮ ಬೇಡನ್ ಪೋವೆಲ್‌ರವರ ಬಗ್ಗೆ ವಿವರಿಸಿದರು. ಶ್ರೀ ಕೃಷ್ಣಮೂರ್ತಿ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ತರೀಕೆರೆ ಇವರು ಕಾರ್ಯಕ್ರಮ ವ್ಯವಸ್ಥೆ ಮಾಡಲು ಸಹಕರಿಸಿದ ಸರ್ವರನ್ನು ವಂದಿಸಿದರು. ರ‍್ಯಾಲಿಯಲ್ಲಿ ಆಕರ್ಷಕ ಪಥಸಂಚಲನ ಕಾರ್ಯಕ್ರಮವನ್ನು ನಗರದ ಪ್ರಮುಖ ಬೀದಿಗಳಲ್ಲಿ ಏರ್ಪಡಿಸಲಾಗಿತ್ತು. ಸ್ಕೌಟ್ಸ್-ಗೈಡ್ಸ್‌ಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕಿನ ದಾಸ್ತಿಕೊಪ್ಪ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 14.2.2004 ರಿಂದ 15.2.2004ರ ವರೆಗೆ ತಾಲೂಕಾ ಮಟ್ಟದ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಈ ರ್‍ಯಾಲಿಯನ್ನು ದಾಸ್ತಿಕೊಪ್ಪ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ವ. ಮುದರಣ್ಣವರ ಇವರು ಉದ್ಘಾಟಿಸಿದರು. ಅತಿಥಿಗಳಾಗಿ ಶ್ರೀ ಎಂ.ಎಂ. ಲೋಂಡೆ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಶ್ರೀ ಬಿ.ಕೆ. ಪಾಟೀಲ, ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ಎ.ವಿ. ಶಿಂಧೆ, ಜಿಲ್ಲಾ ಸಂಘಟನಾ ಆಯುಕ್ತರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಸಿ.ಎಸ್. ಪಾಟೀಲ, ಎಸ್.ಡಿ.ಎಂ.ಸಿ. ಅಧ್ಯಕ್ಷರು ವಹಿಸಿದ್ದರು. ಶ್ರೀ ಎಂ.ಎಚ್. ಗೌರಣ್ಣವರ ಕಾರ್ಯಕ್ರಮ ನಿರೂಪಿಸಿದರು. ತಾಲೂಕಾ ಕಾರ್ಯದರ್ಶಿಗಳಾದ ಶ್ರೀ ಎ.ವಿ. ಜಯರಾಮನವರ ಸ್ವಾಗತಿಸಿದರು. ದಾಸ್ತಿಕೊಪ್ಪ ಶಾಲೆಯ ಪ್ರಧಾನಗುರುಗಳಾದ ಶ್ರೀ ಹೆಚ್.ಎಸ್. ಆದೆಪ್ಪನವರ ವಂದಿಸಿದರು.

ಉತ್ತರಕನ್ನಡ ಜಿಲ್ಲೆ

ಕುಮಟಾ ತಾಲೂಕ ಜನತಾ ವಿದ್ಯಾಲಯ ಧಾರೇಶ್ವರ ಹೈಸ್ಕೂಲಿನಲ್ಲಿ ಲಾರ್ಡ್ ಬೆಡನ್ ಪೊವೆಲ್ಲರ ದಿನಾಚರಣೆಯನ್ನು ಆಚರಿಸಲಾಯಿತು. ಪೊವೆಲ್ಲರ ಭಾವ ಚಿತ್ರದ ಮುಂದೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ.ಡಿ. ಲಮಾಣಿಯವರು ದೀಪ ಬೆಳಗಿಸಿದರು. ಸರ್ವಧರ್ಮ ಪ್ರಾರ್ಥನೆಯನ್ನು ಸಾಮೂಹಿಕವಾಗಿ ಮಾಡಿದರು.

ಕೋಲಾರ ದಕ್ಷಿಣ ಜಿಲ್ಲೆ

ದಿನಾಂಕ 23.2.2004 ರಂದು ಮುಳಬಾಗಿಲು ತಾಲ್ಲೂಕಿನ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರ ಸಾಮಾನ್ಯ ಮಾಹಿತಿ ಶಿಬಿರವನ್ನು ಮುಳಬಾಗಿಲು ಎ.ಪಿ.ಎಂ.ಸಿ. ಯಾರ್ಡಿನಲ್ಲಿ ಏರ್ಪಡಿಸಲಾಗಿತ್ತು.

ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೆ.ಎಂ. ಜಯರಾಮರೆಡ್ಡಿರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಕೆ.ಎಸ್. ನಾಗರಾಜಗೌಡರು, ಕ್ಷೇತ್ರ ಸಂಯೋಜಕರು ಭಾಗವಹಿಸಿದ್ದರು. ತಾಲ್ಲೂಕಿನ ಎಲ್ಲಾ ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಮತ್ತು ಗುಚ್ಛ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದರು. 420 ಜನ ಮುಖ್ಯ ಶಿಕ್ಷಕರು ಭಾಗವಹಿಸಿದ್ದರು. ರಾಜ್ಯ ಸಂಸ್ಥೆಯಿಂದ ರಾಜ್ಯ ಸಂಘಟನಾ ಆಯುಕ್ತ ಶ್ರೀ ನಾರಾಯಣಶೆಟ್ಟಿರವರು ಮತ್ತು ಕು|| ಶಬಾನಾ ತಬಸ್ಸುಂ, ಶ್ರೀ ಎಂ.ವಿ. ಜರ್ನಾದನ್‌ರವರು, ಶ್ರೀ ಬಿ.ಎನ್. ಬಾಲಕೃಷ್ಣರೆಡ್ಡಿ, ಚಾಂದ್ ಪಾಷಾ, ಪ್ರಭಾಕರ್, ಶ್ರೀ ಶ್ರೀನಿವಾಸಗೌಡ ಮತ್ತು ಶ್ರೀ ಕೆ.ಎನ್. ಪ್ರಸಾದ್‌ರವರು ಸಾಮಾನ್ಯ ಮಾಹಿತಿ ಶಿಬಿರದಲ್ಲಿ ವಿಷಯಗಳನ್ನು ತಿಳಿಸಿದರು. ಮುಖ್ಯ ಶಿಕ್ಷಕರ ಸ್ಪಂದನೆ ಉತ್ತಮವಾಗಿತ್ತು.

ಮೈಸೂರು ಗ್ರಾಮಾಂತರ ಜಿಲ್ಲೆ

ಲೇಡಿ ಬಿ.ಪಿ ಮತ್ತು ಬಿ.ಪಿ.ಯವರ ಜನ್ಮ ದಿನಾಚರಣೆ

ದಿನಾಂಕ 24.2.2004 ರಂದು ಲಾರ್ಡ್ ಬಿ.ಪಿ. ಮತ್ತು ಲೇಡಿ ಬಿ.ಪಿ.ಯವರ ಜನ್ಮ ದಿನಾಚರಣೆಯನ್ನು ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ನಂಜನಗೂಡಿನಲ್ಲಿ ಏರ್ಪಡಿಸಲಾಗಿತ್ತು. 350 ಸ್ಕೌಟ್ಸ್ ಮತ್ತು 70 ಸ್ಕೌಟ್ ಮಾಸ್ಟರ್ಸ್, ಗೈಡ್ಸ್ ಕ್ಯಾಪ್ಟನ್ ಹಾಜರಿದ್ದರು. ಉದ್ಘಾಟನೆ ಮಾಡಿದ ಶ್ರೀ ಎಸ್.ಸಿ. ಬಸವರಾಜು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಸ್ಕೌಟ್ಸ್ ಮತ್ತು ಗೈಡ್ ಕಾರ್ಯ ಚಟುವಟಿಕೆಗಳಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ನೀಡಿದರು ಶ್ರೀ ಜಿ.ಆರ್. ಅಶ್ವತ್ ನಾರಾಯಣ್, ಡಿ.ಸಿ.ಸಿ., ಚಾಮರಾಜನಗರ, ಶ್ರೀ ಕಾಂತರಾಜಸ್ವಾಮಿ, ಎ.ಡಿ.ಸಿ., ಶ್ರೀಮತಿ ವಿ.ಪಿ. ಹಬೀಬ್, ಶ್ರೀ ವೈ.ಕೆ.ಎಲ್. ಸ್ವಾಮಿ, ಶ್ರೀ ಆರ್.ವಿ.

ಮಹಾದೇವಸ್ವಾಮಿ, ಜಿಲ್ಲಾ ಕಾರ್ಯದರ್ಶಿ, ಶ್ರೀ ಕಾಳಯ್ಯ ಚಿನ್ನದ ಗುಡಿಹುಂಡಿ, ಶ್ರೀ ಶಿವರಾಜು, ಗ್ರಾಮಪಂಚಾಯ್ತಿ ಅಧ್ಯಕ್ಷರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ವಿ.ಎಂ. ರಾಮಚಂದ್ರ, ಡಿ.ಓ.ಸಿ.(ಎಸ್) ಕಾರ್ಯಕ್ರಮ ನಿರೂಪಣೆ ಮಾಡಿದರು.

25.2.2004 ರಂದು ಲಾರ್ಡ್ ಬಿ.ಪಿ. ಮತ್ತು ಲೇಡಿ ಬಿ.ಪಿಯವರ ಜನ್ಮ ಜಿನಾಚರಣೆಯನ್ನು - ಸಂತಜೋಸೆಫರ ಪ್ರಾಥಮಿಕ ಶಾಲೆ, ಚಾಮರಾಜನಗರ, ಇಲ್ಲಿ ನಡೆಸಲಾಯಿತು. ಸ್ವಾಗತ ಶ್ರೀ ಕೆ.ಎಸ್. ಮಹಾದೇವಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಾಡಿದರು. ಉದ್ಘಾಟನೆಯನ್ನು ಶ್ರೀ ಜಿ.ಎಲ್. ಚಂದ್ರಶೇಖರಯ್ಯ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರು ನೆರವೇರಿಸಿ ಸಂಸ್ಥೆಗೆ ಪುರಸಭೆಗಳಿಂದ ಅನುದಾನ ಕೊಡಿಸಿಕೊಡಲಾಗುವುದೆಂದು ಹೇಳಿದರು. ಮುಖ್ಯ ಅತಿಥಿ ಶ್ರೀ ಬಿ.ಎ. ರಾಜಶೇಖರ, ಪ್ರಭಾರಿಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಾಮರಾಜನಗರ, ಶ್ರೀ ಜಿ.ಆರ್. ಅಶ್ವತ್‌ನಾರಾಯಣ, ಡಿ.ಸಿ.ಸಿ., ಶ್ರೀಮತಿ ಪ್ರೇಮ ಶಿವಸ್ವಾಮಿ, ಡಿ.ಸಿ.(ಜಿ), ಶ್ರೀ ಸುರೇಶ್‌ಕುಮಾರ್ ಖಜಾಂಚಿ, ಶ್ರೀ ಪಿ. ರಾಜು, ಜಿಲ್ಲಾ ಕಾರ್ಯದರ್ಶಿ ಚಾಮರಾಜನಗರ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ವಿ.ಎಂ. ರಾಮಚಂದ್ರ. ಡಿ.ಓ.ಸಿ.(ಎಸ್) ಲಾರ್ಡ್ ಬಿ.ಪಿ. - ಲೇಡಿ ಬಿ.ಪಿ. ಯವರ ಜನ್ಮ ಚರಿತ್ರೆಯನ್ನು ತಿಳಿಯ ಪಡಿಸಿದರು.

ಸಂಸ್ಥಾಪಕರ ದಿನಾಚರಣೆ

ದಿನಾಂಕ 26.2.2004 ರಂದು ಬೆಳಗ್ಗೆ 9.30 ಕ್ಕೆ ಬಿ.ಪಿ. ದಿನಾಚರಣೆಯನ್ನು ಕೊಳ್ಳೇಗಾಲದಲ್ಲಿ ಆಚರಿಸಲಾಯಿತು. ಶ್ರೀ ವೀರಪ್ಪ. ಚೌಡೇಶ್ವರಿ ಶಾಲಾ ಆಡಳಿತ ಮಂಡಳಿ ಮುಖ್ಯಸ್ಥರು. ಶ್ರೀ ಚಂದ್ರಶೇಖರಯ್ಯ ಎಲ್.ಎ. ಅಧ್ಯಕ್ಷರು ಉಪಸ್ಥಿತರಿದ್ದರು. ಶ್ರೀ ಚೌಡೇಶ್ವರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಉದ್ಘಾಟನೆಗೊಳಿಸಿದರು. ಪ್ರಭಾತ್ ಪೇರಿಯನ್ನು ಕೊಳ್ಳೇಗಾಲ ಟೌನ್‌ನಲ್ಲಿ ನಡೆಸಲಾಯಿತು. ಶ್ರೀ ಜಿ.ಆರ್. ಅಶ್ವತ್ ನಾರಾಯಣ್, ಡಿ.ಸಿ.ಸಿ. ಇವರು ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿದ್ದರು. 350 ಸ್ಕೌಟ್ಸ್ ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

ಕುಷ್ಟಗಿ ತಾಲ್ಲೋಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಸ್ಥಳೀಯ ಸಂಸ್ಥೆ ಕುಷ್ಟಗಿ, ಕೊಪ್ಪಳ ಜಿಲ್ಲೆ. ತಾಲೂಕಾ ಮಟ್ಟದ ಮಕ್ಕಳ ಮೇಳವು ದಿನಾಂಕ 09.03.2004 ರಂದು ಜರುಗಿತು. ಈ

ಗೈಡ್ಸ್‌ನ ಹೊಸ ಘಟಕವನ್ನು ಶ್ರೀ ಬುತ್ತಿ ಬಸವೇಶ್ವರ ಶಾಲೆ ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿ ದಿನಾಂಕ 03-03-2004 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಆರ್.ಸಿ. ಹಲಗತ್ತಿಯವರು ಉದ್ಘಾಟನೆ ಮಾಡಿದರು. ಅಧ್ಯಕ್ಷತೆಯನ್ನು ಶ್ರೀ ಬಸಪ್ಪ ಚಿನಿವಾಲ ಮುಖ್ಯ ಗುರುಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ದೊಡ್ಡನಗೌಡ ಗೌಡರ, ಕಾರ್ಯದರ್ಶಿ ಆಗಮಿಸಿದ್ದರು. ಅತಿಥಿಗಳಾಗಿ ಶ್ರೀ ಸಿದ್ದಪ್ಪ ಚಿನಿವಾಲ, ಶ್ರೀ ಶರಣಪ್ಪ ಕಂದಕೂರ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸ್ಕೌಟ್ ಮಕ್ಕಳು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿದ್ದಕ್ಕೆ ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು. ಗೈಡ್ಸ್ ಕಾಪ್ಟನ್ ಶ್ರೀಮತಿ ಮಂಜುಳಾ ಸ.ಶಿ. ಸ್ವಾಗತಿಸಿದರು. ವಂದನಾರ್ಪಣೆ ಯನ್ನು ಶ್ರೀ ಶಿವಕುಮಾರ್ ಆರಾಳಗೌಡರು ಮಾಡಿದರು, ನಿರೂಪಣೆ ಶ್ರೀ ಸಂಗಣ್ಣ ಗಿರಿಸಾಗರ ಮಾಡಿದರು. ಸ್ಕೌಟ್ ಮಾಸ್ಟರಾದ ಶ್ರೀ ಬಲರಾಮಜೋಶಿ ಉಪಸ್ಥಿತರಿದ್ದರು. ಪ್ರೌಢಶಾಲಾ ಮುಖ್ಯಸ್ಥರಾದ ಶ್ರೀ ಎಂ.ಕೆ. ಬಂಡಿಹಾಳ ಆಗಮಿಸಿದ್ದರು.

ಮೇಳಕ್ಕೆ ರಾಜ್ಯದ ಸಂಘಟನಾ ಆಯುಕ್ತರಾದ ಶ್ರೀ ನಾರಾಯಣ ಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಗರದಲ್ಲಿ ಮಕ್ಕಳ ಪ್ರಭಾತ ಪೇರಿಯನ್ನು ಸ್ಥಳೀಯ ಘಟಕದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ ಧ್ವಜ ಬೀಸುವ ಮೂಲಕ ಪ್ರಾರಂಭಿಸಿದರು. ನಂತರ ನಗರದಲ್ಲಿ ಸಂಚಾರ ಮಾಡಿ ಶ್ರೀ ರೇಣುಕಾಚಾರ್ಯ ಕಲ್ಯಾಣ ಮಂಟಪ ಕುಷ್ಟಗಿಯಲ್ಲಿ ಮೇಳವು ಸಮಾವೇಶಗೊಂಡಿತು. ಮೇಳದ ಅಧ್ಯಕ್ಷತೆಯನ್ನು ಎಲ್.ಎ. ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಬಿ.ಜಿ. ನಾಯಕ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ರಾಮಯ್ಯ ಸ್ವಾಮಿ ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಆರ್.ಸಿ. ಹಲಗತ್ತಿ, ಬಿ.ಇ.ಓ., ಶ್ರೀ ಜಯರಾಜ ಭೂಸದ ಜಿಲ್ಲಾ ಸಂಘಟನಾ ಆಯುಕ್ತರು ಆಗಮಿಸಿದ್ದರು. ಸುಮಾರು 500 ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು. 54 ಸ್ಕೌಟ್ ಮತ್ತು 24 ಗೈಡ್ ಶಿಕ್ಷಕ - ಶಿಕ್ಷಕಿಯರು ಭಾಗವಹಿಸಿದ್ದರು. ಎಲ್.ಎ. ಕಾರ್ಯದರ್ಶಿ ಶ್ರೀ ದೊಡ್ಡನಗೌಡ ಗೌಡರ ಸ್ವಾಗತಿಸಿದರು. ವಂದನಾರ್ಪಣೆಯನ್ನು ಶ್ರೀ ಬಸವರಾಜ ಬಾಗರಿ ಮಾಡಿದರು ನಿರೂಪಣೆಯನ್ನು ಶ್ರೀ ಈರಣ್ಣ ಮಾಡಿದರು.

ಶಿವಮೊಗ್ಗ ಜಿಲ್ಲೆ
ಸಂಸ್ಥಾಪಕರ ದಿನಾಚರಣೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ಶಿವಮೊಗ್ಗ ಹಾಗೂ ಸ್ಥಳೀಯ ಸಂಸ್ಥೆ, ಶಿವಮೊಗ್ಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 22.2.2004 ರಂದು ಮಧ್ಯಾಹ್ನ 3-00 ಗಂಟೆಗೆ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳಿಗೆ ಸಂಸ್ಥಾಪಕರ ಬಗ್ಗೆ ಭಾಷಣ ಸ್ಪರ್ಧೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಸ್ಕೌಟ್ಸ್- ಗೈಡ್ಸ್‌ಗಳ ಪಾತ್ರದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸಂಜೆ 5-00 ಗಂಟೆಗೆ ಪ್ರಾರಂಭವಾದ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯಶ್ರೀ ಟಿ.ವಿ. ನಾರಾಯಣಶಾಸ್ತ್ರಿ, ಜಿಲ್ಲಾ ಪ್ರಧಾನ ಆಯುಕ್ತರು ವಹಿಸಿದ್ದರು. ಸಂಸ್ಥಾಪಕರ ಬಗ್ಗೆ ಭಾಷಣ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನದಲ್ಲಿ ಬಂದ ಕಸ್ತೂರಿ ಬಾಲಕಿಯರ ಪ್ರೌಢಶಾಲೆಯ ಗೈಡ್ ಶ್ವೇತ ಬಿಂದು ಹಾಗೂ 2ನೇ ಸ್ಥಾನದಲ್ಲಿನ ಗ್ರಾಮಾಂತರ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸ್ಕೌಟ್ ಮಂಜುನಾಥ ಇವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರೊ. ಎ.ಎಸ್. ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ರವರು ಮಕ್ಕಳನ್ನುದ್ದೇಶಿಸಿ ತಾವು ಭೇಟಿ ನೀಡಿದ ದಕ್ಷಿಣ ಆಫ್ರಿಕಾದ ನ್ಯರೇರಿಯಾದ ಲಾರ್ಡ್ ಬೇಡನ್ ಪೊವೆಲ್‌ರವರ ಮನೆ, ಸಮಾಧಿಯ ಬಗ್ಗೆ ವಿಸ್ತಾರವಾಗಿ ತಿಳಿಸಿದರು.

ಚಿತ್ರಕಲೆಯಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಬಹುಮಾನಗಳನ್ನು ಶ್ರೀಮತಿ ಭಾರತಿ ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಗೈಡ್ಸ್) ರವರು ವಿತರಿಸಿದರು. ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸ್ಕೌಟ್ಸ್, ಗೈಡ್ಸ್‌ಗಳಿಗೆ ಶ್ರೀ ಕೆ.ಪಿ. ಬಿಂಧುಕುಮಾರ್, ಜಿಲ್ಲಾ ಸ್ಥಾನಿಕ ಆಯುಕ್ತರು (ಕಬ್ಸ್)ರವರು ಬಹುಮಾನವನ್ನು ವಿತರಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಟಿ.ವಿ. ನಾರಾಯಣಶಾಸ್ತ್ರಿಯವರು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದ. ಗೈಡ್ ಶ್ವೇತ ಬಿಂದುಗೆ ರೂ.100 ಬಹುಮಾನ ನೀಡಿದರು. ಅದೇ ತರಹ ಚಿತ್ರಕಲೆಯಲ್ಲಿ ಮೊದಲ ಸ್ಥಾನ ಪಡೆದ ಗೈಡ್ ಪ್ರಜ್ಞಾ ಎ.ಎಸ್.ರವರ ಚಿತ್ರವನ್ನು ಯುಗಾದಿಯ ಹೊಸ ವರ್ಷದ ಗ್ರೀಟಿಂಗ್ ಆಫ್‌ಸೆಟ್ ಪ್ರಿಂಟ್ ಮಾಡಿಸಿ ಸಂಸ್ಥೆಯ ಪದಾಧಿಕಾರಿಗಳಿಗೆ ಹಂಚಲು ಸೂಚಿಸಿದರು. ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳ ಸೇವೆ

ದಿನಾಂಕ 18.2.2004 ರಂದು ಆರಕೆರೆ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ನಡೆದ ಶಿವರಾತ್ರಿ ಜಾತ್ರೆಯಲ್ಲಿ

ಮಲ್ನಾಡ ಓಪನ್ ಗ್ರೂಪ್ ಮತ್ತು ಜೆ.ಪಿ.ಎನ್. ಪ್ರೌಢಶಾಲೆಯ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಭಾಗವಹಿಸಿ ಸಾರ್ವಜನಿಕರಿಗೆ ನೀರು, ಪ್ರಸಾದ ಹಂಚುವುದು, ತುಂಗಾ ನದಿಯಲ್ಲಿ ಸ್ನಾನ ಮಾಡುವವರಿಗೆ ಎಚ್ಚರಿಕೆ ನೀಡುವ ಕಾರ್ಯವನ್ನು ಮಾಡಿ ಜನ ಮನ್ನಣೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಶ್ರೀ ಟಿ.ಎ. ಮಂಜುನಾಥಾಚಾರ್ (ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಅವರೊಂದಿಗಿದ್ದರು.

ಶ್ರೀ ವೀರಭದ್ರೇಶ್ವರ ಓಪನ್ ರೋವರ್ ಕ್ರ್ಯೂ ಮತ್ತು ಜಗಜ್ಯೋತಿ ಬುಲ್‌ಬುಲ್ ಪ್ಯಾಕ್ ಮತ್ತು ಬಾಪೂಜಿ ಸ್ಕೌಟ್ ದಳಗಳ ಉದ್ಘಾಟನಾ ಸಮಾರಂಭ

ದಿನಾಂಕ 12.3.2004 ರಂದು ಶಿವಮೊಗ್ಗ ತಾಲ್ಲೂಕಿನ ತ್ಯಾಜವಳ್ಳಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಜಗಜ್ಯೋತಿ ಬುಲ್‌ಬುಲ್ ಫ್ಲಾಕ್ ಮತ್ತು ಬಾಪೂಜಿ ಸ್ಕೌಟ್ ದಳ ಹಾಗೂ ಇದೇ ಗ್ರಾಮದಲ್ಲಿ ಹೊಸದಾಗಿ ರೋವರ್ ನಾಯಕ ತರಬೇತಿ ಹೊಂದಿದ ಶ್ರೀ ಟಿ.ಜೆ. ವೀರೇಶರಿಂದ ಶ್ರೀ ವೀರಭದ್ರೇಶ್ವರ ಓಪನ್ ರೋವರ್ಸ್ ಕ್ರ್ಯೂ ಉದ್ಘಾಟನಾ ಸಮಾರಂಭವು ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಂತರ ಶ್ರೀಮತಿ ಎಸ್. ಮಂಜಮ್ಮ ಲೇಡಿ ಸ್ಕೌಟ್ ಮಾಸ್ಟರ್ ಸರ್ವರನ್ನು ಸ್ವಾಗತಿಸಿದರು. ಶ್ರೀ ಟಿ.ವಿ. ನಾರಾಯಣಶಾಸ್ತ್ರಿ, ಜಿಲ್ಲಾ ಮುಖ್ಯ ಆಯುಕ್ತರಿಂದ ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಗೊಂಡಿತು. ನಂತರ ಇದೇ ದಳದ ಹಾಗೂ ಶಿವಮೊಗ್ಗ ಜಿಲ್ಲೆಯ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಶ್ರೀ ಟಿ.ಎ. ಮಂಜುನಾಥಾಚಾರ್‌ರವರು ಪ್ರಾಸ್ತಾವಿಕವಾಗಿ ಮೇಲ್ಕಂಡ ದಳಗಳ ಬಗ್ಗೆ ಮಾತನಾಡಿದರು.

ಪ್ರೊ. ಎ.ಎಸ್. ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀಮತಿ ಭಾರತಿ ಶೇಖರ್, ಜಿಲ್ಲಾ ಆಯುಕ್ತರು (ಗೈ), ಶ್ರೀ ಎಂ.ಜಿ. ಶಿವಕುಮಾರ್, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಹೆಚ್.ಡಿ. ಉದಯ ಶಂಕರ ಶಾಸ್ತ್ರಿ, ಜಿಲ್ಲಾ ಸ್ಥಾನಿಕ ಆಯುಕ್ತರು (ರೋವರ್ಸ್) ರವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಇದೇ ಗ್ರಾಮದ ಪ್ರೌಢಶಾಲೆಯ ಗುರುಗಳಾದ ಶ್ರೀ ಬಸವರಾಜಪ್ಪನವರು ಜೂನ್‌ನಿಂದ ತಮ್ಮ ಪ್ರೌಢ ಶಾಲೆಯಲ್ಲಿ ಒಂದು ಸ್ಕೌಟ್ ಟ್ರೂಪ್, ಒಂದು ಗೈಡ್ ಕಂಪನಿಯನ್ನು ಪ್ರಾರಂಭಿಸಲು ವಾಗ್ದಾನ ಮಾಡಿದರು. ಸಭೆಯಲ್ಲಿ ಶ್ರೀಮತಿ ಸಾವಿತ್ರಮ್ಮ ಪ್ರಧಾನ ಗುರುಮಾತೆ, ಶ್ರೀ ಎನ್. ಪ್ರೇಮಕುಮಾರ, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಮಾತನಾಡಿದರು. ಶ್ರೀ ಟಿ.ವಿ. ನಾರಾಯಣ ಶಾಸ್ತ್ರಿಯವರು ತಮ್ಮ ಹಿಂದಿನ ಅನುಭವಗಳನ್ನು ಸಭೆಯಲ್ಲಿ ಹಂಚಿಕೊಂಡರು. ಅಧ್ಯಕ್ಷತೆಯನ್ನು ವಹಿಸಿದ್ದ. ಶ್ರೀ ಎನ್. ಚಂದ್ರಪ್ಪ ನಿವೃತ್ತ ಶಿಕ್ಷಕರು ಸಂಸ್ಥೆ ಬೆಳಯುಲೆಂದು ಹಾರೈಸಿದರು. ಊರಿನ ಇನ್ನೊಬ್ಬ ನಿವೃತ್ತ ಶಿಕ್ಷಕ ಶ್ರೀ ನಾಗಪ್ಪನವರು ಊರಿನ ಗಣ್ಯ ನಾಗರೀಕರು, ಹಾಜರಿದ್ದರು. ಇದೇ ಸಂದರ್ಭದಲ್ಲಿ 25 ಜನ ರೋವರ್ಸ್‌ಗಳಿಗೆ ಜಿಲ್ಲಾ ಸಂಸ್ಥೆಯಿಂದ ಸ್ಕೌಟ್ಸ್, ಓಗಲ್‌ಗಳನ್ನು ನೀಡಲಾಯಿತು ಮತ್ತು ಶ್ರೀ ಟಿ.ಎ. ಮಂಜುನಾಥಾಚಾರ್, ಎ.ಎಸ್.ಓ.ಸಿ.(ಎಸ್) ರವರು ತಾವು ಓದಿದ ಶಾಲೆಯ ಸ್ಕೌಟ್ಸ್‌ಗಳಿಗೆ 24 ಜೊತೆ ಸ್ಕೌಟ್ ಸಮವಸ್ತ್ರ ಸ್ಕೌಟ್ಸ್ ಓಗಲ್‌ಗಳನ್ನು ಉಚಿತವಾಗಿ ದೇಣಿಗೆ ನೀಡಿದರು.

ಕೊನೆಯಲ್ಲಿ ಶ್ರೀಮತಿ ರತ್ನವ್ವ, ಶ್ರೀ ಗಂಗಪ್ಪನವರ ಪ್ಲಾಕ್ ಲೀಡರ್ ವಂದನೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಮಂಡ್ಯ ಜಿಲ್ಲೆ

ದಿನಾಂಕ 22.2.2004 ರಂದು ಬೆಳಿಗ್ಗೆ 9.00 ಗಂಟೆಗೆ ಜಿಲ್ಲಾ ಸ್ಕೌಟ್ಸ್ ಭವನದಿಂದ ಲಾರ್ಡ್ ಬೇಡೆನ್ ಪೋವೆಲ್ ಮತ್ತು ಲೇಡಿ ಬೇಡೆನ್ ಪೋವೆಲ್‌ರವರ ಭಾವಚಿತ್ರಗಳ ಸಮೇತ ಮಂಡ್ಯದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ ವಿವಿಧ



ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್ಸ್ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು.

ಕಾರ್ಯಕ್ರಮಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ 500 ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್‌ಗಳು ಹಾಗೂ ಸ್ಕೌಟ್ಸ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಫ್ಲಾಕ್ ಲೀಡರ್ ಮತ್ತು ಹೆಡ್ ಮಾಸ್ಟರುಗಳು ಹಾಜರಿದ್ದರು. ಇದಲ್ಲದೇ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಹಾಗೂ ಅನೇಕ ಗಣ್ಯವ್ಯಕ್ತಿಗಳು ಈ ಸಮಾರಂಭದಲ್ಲಿ ಹಾಜರಿದ್ದರು. ಸಮಾರಂಭವು ಯಶಸ್ವಿಯಾಗಿ ನಡೆಯಲು ಸಹಕರಿಸಿದರು. ಇದೇ ದಿನ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಸಹಕರಿಸಿದರು.

ದಿನಾಂಕ 5.3.2004 ರಿಂದ 7.3.2004ರ ವರೆಗೆ ಜಿಲ್ಲಾ ಸ್ಕೌಟ್ಸ್-ಗೈಡ್ಸ್‌ಗಳ ಪೆಟ್ರೋಲ್ ಲೀಡರ್ ಶಿಬಿರ ಹಾಗೂ ಸಮುಧಾಯು ಸೇವಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ 50 ಸ್ಕೌಟ್ಸ್‌ಗಳು ಮತ್ತು 50 ಗೈಡ್ಸ್‌ಗಳು ಹಾಗೂ ಶಿಕ್ಷಕ-ಶಿಕ್ಷಕಿಯರು ಭಾಗವಹಿಸಿದ್ದರು. ಸಮುದಾಯ ಸೇವಾ ಕಾರ್ಯಕ್ರಮದ ಅಂಗವಾಗಿ ದಿನಾಂಕ 6.3.2004 ಹಾಗೂ 7.3.2004 ರಂದು ಮಂಡ್ಯ ನಗರದ ಕೊಳಚೆ ಪ್ರದೇಶದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡಿದ್ದರು.

ಗದಗ್ ಜಿಲ್ಲೆ

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಬಟ್ಟೂರು ಶಾಲೆಯ ಶ್ರೀಮಾತೆ ಶಾರದಾದೇವಿ ಗೈಡ್ಸ್‌ದಳದಿಂದ ದಿನಾಂಕ 22.2.2004 ರಂದು ಚಳುವಳಿಯ ಜನಕ



ನಗುಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 22.02.2004 ರಂದು ಸ್ಥಾಪಕರ ದಿನಾಚರಣೆ ಹಾಗೂ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ಕೌಟ್ಸ್, ಗೈಡ್ಸ್‌ಗಳು



ಲಾರ್ಡ್ ಬೆಡನ್ ಪಾವೆಲ್ ಅವರ 147ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಲಾರ್ಡ್ ಬೆಡನ್ ಪಾವೆಲ್ ಅವರ 147ನೇ ಜನ್ಮ ದಿನಾಚರಣೆಯನ್ನು ಊರಿನ ನಾಗರಿಕರ ಸಮ್ಮುಖದಲ್ಲಿ ಆಚರಿಸಲಾಯಿತು. ಅಂದೇ ಪಲ್ಸ್ ಪೊಲಿಯೋ ಕಾರ್ಯಕ್ರಮವಿದ್ದ ಕಾರಣ ಅದರಲ್ಲಿಯೂ ಕೂಡಾ ಸ್ಕೌಟ್ಸ್‌ಗಳು ಭಾಗವಹಿಸಿ ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರವಾದರು.

ಕೋಲಾರ ಉತ್ತರ ಜಿಲ್ಲೆ

22.2.2004 ರಂದು ಬಿ.ಪಿ. ದಿನಾಚರಣೆ, ಪಲ್ಸ್ ಪೋಲಿಯೋ, ತಾಲ್ಲೂಕು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪನವರ ಅಧ್ಯಕ್ಷತೆಯಲ್ಲಿ ನೇರವೇರಿತು 175 ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಈ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿ ಡಬ್ಲ್ಯೂ.ಇ.ಎಸ್. ಕುಮಾರ್ ಸ್ವಾಗತಿಸಿದರು. ಶ್ರೀ ಕೆ.ಜಿ. ವೆಂಕಟರಂಗಂ ವಂದಿಸಿದರು. ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ವಿಠಲ್ ರಾವ್ ವಾರ್ಷಿಕ ವರದಿ ಮಂಡಿಸಿದರು. ಸಮಾರಂಭದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಪ್ರಹ್ಲಾದಗೌಡರು ಜಿಲ್ಲಾ ಆಯುಕ್ತೆ ಶ್ರೀಮತಿ ಕೆ.ಆರ್. ಜಯಶ್ರೀ (ಗೈ) ಜಿಲ್ಲಾ ಖಜಾಂಚಿಗಳಾದ ಶ್ರೀ ಬಿಸ್ತಪ್ಪಗೌಡರು ಎ.ಡಿ.ಸಿ.,

22.02.2004 ರಂದು ಪಲ್ಸ್ ಪೋಲಿಯೋ ಮತ್ತು ಬಿ.ಪಿ. ದಿನಾಚರಣೆ ಪ್ರಭಾತ್ ಪೇರಿ ಚಿತ್ರ

22.02.2004 ರಂದು ತಾಲ್ಲೂಕು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ನವರು ಮಾತನಾಡುತ್ತಿರುವುದು.

ಶ್ರೀ ಕೆ.ಆರ್. ಸುರೇಶ್ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಸಹ ಹಾಜರಿದ್ದರು.

ಬೀದರ್ ಜಿಲ್ಲೆ

ಜಿಲ್ಲಾ ಮಟ್ಟದ ಕ್ಯಾಂಪೋರಿಯನ್ನು ದಿನಾಂಕ 22.2.2004 ರಂದು ಡಿ.ಡಿ.ಪಿ.ಐ. ಶ್ರೀ ಅಮೃತ ಬೆಟ್ಟದ ಅವರು ಉದ್ಘಾಟನೆ ಮಾಡಿದರು. ಅಂದು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ವಿವಿಧ ತರಹದ ಸ್ಪರ್ಧೆಗಳನ್ನು

ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸ್ಕೌಟ್ಸ್‌ಗಳು ಭಾಗವಹಿಸಿದರು.

ಏರ್ಪಡಿಸಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರು ಹಾಗು ಜಿಲ್ಲಾ ಆಯುಕ್ತರು (ಗೈ) ಭಾಗವಹಿಸಿದ್ದರು. ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ನಾರಾಯಣರಾವ್ ಮನ್ನಳ್ಳಿ ಮಾಜಿ ಎಂ.ಎಲ್.ಎ., ಶ್ರೀಮತಿ ರತ್ನ ಕುಸನೂರ, ಎಂ.ಎಲ್.ಸಿ., ಡಾ|| ಎಸ್.ಎಸ್. ಸಿದ್ಧಾರೆಡ್ಡಿಯವರು ಭಾಗವಹಿಸಿದ್ದರು. ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಎಂ.ಎಲ್.ಸಿ. ಶ್ರೀಮತಿ ರತ್ನಕುಸನೂರ ಬಹುಮಾನ ವಿತರಿಸಿದರು.

ದಕ್ಷಿಣ ಕನ್ನಡ ಜಿಲ್ಲೆ

ಚಿಂತನಾ ದಿನಾಚರಣೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಂಗಳೂರು ನಗರ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ, ಕಬ್ಸ್ ಬುಲ್‌ಬುಲ್ಸ್ ಉತ್ಸವ

ದಿನಾಂಕ 22.2.2004 ರಂದು ಸೈಂಟ್ ವಿಕ್ಟೋರಿಯಾ ಪದವಿಪೂರ್ವ ಕಾಲೇಜು, ಲೇಡಿಹಿಲ್ ಮಂಗಳೂರು ಇಲ್ಲಿ ರ್‍ಯಾಲಿ ಸಂಘಟಿಸಲಾಯಿತು. ರ್‍ಯಾಲಿಯನ್ನು ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ಐರಿನ್ ಡಿಕುನ್ಹ ಉದ್ಘಾಟಿಸಿದರು. ರ್‍ಯಾಲಿಯ ಸಮಾರೋಪ ಸಮಾರಂಭ ಮತ್ತು ಚಿಂತನಾ ಮತ್ತು ಸ್ಥಾಪನಾ ದಿನಾಚರಣೆಯು ಮಂಗಳೂರು ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಐ.ಎ. ಕೈರನ್ನ ಕಾರ್ಯಕ್ರಮಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ಸುಳ್ಯ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ ಕಬ್ಸ್ ಬುಲ್‌ಬುಲ್ಸ್ ಉತ್ಸವ

ಸುಳ್ಯ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ ಕಬ್ಸ್ ಬುಲ್‌ಬುಲ್ಸ್ ಉತ್ಸವವನ್ನು ದಿನಾಂಕ 6.2.2004 ರಿಂದ 7.2.2004ರ ವರೆಗೆ ಸೈಂಟ್ ಬ್ರಿಜಿಡ್ಸ್ ಹಿರಿಯ ಪ್ರಾಥಮಿಕ ಶಾಲೆ, ಸುಳ್ಯ ಇಲ್ಲಿ ಸಂಘಟಿಸಲಾಯಿತು. ಉದ್ಘಾಟನಾ ಸಮಾರಂಭವು ಶ್ರೀಚಂದ್ರಶೇಖರ್ ಕಾಮತ್ ಅಧ್ಯಕ್ಷರು ತಾಲೂಕು ಪಂಚಾಯತ್ ಸುಳ್ಯ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ಥಳೀಯ ಚರ್ಚ್‌ನ ಧರ್ಮಗುರುಗಳಾದ ಫಾ|| ಇಲಿಯಾಸ್‌ರವರು ಮೇಳವನ್ನು ಉದ್ಘಾಟಿಸಿದರು. ಸುಳ್ಯನಗರ ಪಂಚಾಯತ್ ಅಧ್ಯಕ್ಷ ಶ್ರೀ ಎಸ್. ಶಂಶುದ್ದೀನ್, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀಧನಂಜಯ ಅಡ್ಡಂಗಾಯ, ತಾಲೂಕು ಪಂಚಾಯತ್ ಸುಳ್ಯ ಇದರ ಕಾರ್ಯನಿರ್ವಹಣಾಧಿಕಾರಿ ಶ್ರೀ ಎನ್.ಆರ್. ಉಮೇಶ್, ಶ್ರೀ ಬಿ. ಶೇಖರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳ ಪಥಸಂಚಲನವನ್ನು ಸುಳ್ಯ ಪೋಲಿಸ್ ವೃತ್ತನಿರೀಕ್ಷಕರಾದ ಶ್ರೀಚಂದ್ರು ಉದ್ಘಾಟಿಸಿದರು. ಭವ್ಯಶಿಭಿರಾಗ್ನಿಯನ್ನು ಶ್ರೀ ಬಿ. ಸದಾಶಿವ ಭಟ್ ಉಪ ಆರಣ್ಯ ಸಂರಕ್ಷಣಾಧಿಕಾರಿ ಉದ್ಘಾಟಿಸಿದರು. ಶ್ರೀಮತಿ ಗೀತಾ ನಗರ ಪಂಚಾಯಿತ್ ಸದಸ್ಯರು ಅತಿಥಿಗಳಾಗಿ ಆಗಮಿಸಿದ್ದರು. ಸಮಾರೋಪ ಸಮಾರಂಭ ಶ್ರೀ ಎನ್. ಅಂಗರಾ ಶಾಸಕರು ಸುಳ್ಯ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಕುರುಂಜಿ ವೆಂಕಟ್ರಮಾಣ ಗೌಡ ಸ್ಥಾಪಕಾಧ್ಯಕ್ಷರು ಅಕಾಡಮಿ ಆಫ್ ಲಿಬರಲ್ ಎಜ್ಯುಕೇಶನ್ ಸುಳ್ಯ ಶ್ರೀ ಎನ್.ಜಿ. ಮೋಹನ್ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀರಾಮಶೇಷ ಶೆಟ್ಟಿ ಜಿಲ್ಲಾ ಕಾರ್ಯದರ್ಶಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯವತಿಯಿಂದ ಸಂಸ್ಥೆಯ ಸ್ಥಾಪಕ ಶ್ರೀಕುರುಂಜಿ ವೆಂಕಟರಮಣಗೌಡರವರನ್ನು ಶ್ರೀ ಎನ್.ಜಿ. ಮೋಹನ್ ಸನ್ಮಾನಿಸಿದರು ಹಾಗೂ ಕೃತಜ್ಞತಾ ಪದಕವನ್ನು ನೀಡಲಾಯಿತು. (ಸುಳ್ಯ ಸ್ಥಳೀಯ

ಸಂಸ್ಥೆಯವತಿಯಿಂದ ಜಿಲ್ಲಾ ಸಂಸ್ಥೆಗೆ ನೀಡಲಾಯಿತು.) ಹಾಗು ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಸ್ಕೌಟ್ಸ್-ಗೈಡ್ಸ್ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಸ್ಮರಣಿಕೆಗಳನ್ನು ನೀಡಲಾಯಿತು. ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಎಸ್.ಎಂ. ಬಾಪೂ ಸಾಹೇಬ್‌ರವರಿಗೆ ಮೆಡಲ್ ಆಫ್ ಮೆರಿಟ್ ಮತ್ತು ಕೋಶಾಧಿಕಾರಿ ಹಾಜಿ ಶ್ರೀ ಅಬೂಬಕ್ಕರ್ ಕಟ್ಟೆಕಾರ್‌ರವರಿಗೆ ಕೃತಜ್ಞತಾ ಪದಕ ನೀಡಲಾಯಿತು. ಶ್ರೀ ಹೊನ್ನಪ್ಪ ಗೌಡ ಅಧ್ಯಕ್ಷರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ದಕ್ಷಿಣ ಕನ್ನಡ ಸಹಾಯಕ ರಾಜ್ಯ ಸಂಘಟನಾ ಆಯುಕ್ತ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಸಹಾಯಕ ಆಯುಕ್ತರುಗಳಾದ ಶ್ರೀಮತಿ ವಿಮಲ ರಂಗಯ್ಯ, ಶ್ರೀ ಬಿ.ವಿ. ಶಗ್ರಿತ್ತಾಯ, ಶ್ರೀಮತಿ ಕಮಲಾ ರಾಮಚಂದ್ರ, ಶ್ರೀಮತಿ ಪುಷ್ಪ ವಿಶ್ವನಾಥ್ ಇವರುಗಳು ಎಲ್ಲಾ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದು ಪ್ರೋತ್ಸಾಹಿಸಿದರು. ಮೇಳದಲ್ಲಿ ಸುಮಾರು 700 ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್ಸ್‌ಗಳು, ಶಿಕ್ಷಕರು ಭಾಗವಹಿಸಿದ್ದರು. ಶ್ರೀಮತಿ ಪ್ರೇಮಲತ ಎ.ಎಚ್. ಮೇಳದ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವಾಸುದೇವ ನಕ್ಷ ರ್‍ಯಾಲಿಯನ್ನು ಸಂಘಟಿಸಿದರು.

ಮೂಡಬಿದಿರೆ ವಲಯ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ, ಕಬ್ ಬುಲ್‌ಬುಲ್ ಉತ್ಸವ

ದಿನಾಂಕ 30.01.2004 ರಿಂದ 1.2.2004ರ ವರೆಗೆ ಮೂಡಬಿದಿರೆ ವಲಯದ ಸ್ಕೌಟ್ಸ್-ಗೈಡ್ಸ್ ರ್‍ಯಾಲಿ ಮತ್ತು ಬುಲ್‌ಬುಲ್ ಉತ್ಸವ ಆಲಂಗಾರು ಸೈಂ.ದೇ.ಹಿ.ಪ್ರಾ. ಶಾಲೆ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಆತಿಥೇಯತ್ವದಲ್ಲಿ ಇತ್ತೀಚೆಗೆ ಮೂರು ದಿನಗಳ ಕಾಲ ನಡೆಯಿತು. ಶಾಸಕರಾದ ಶ್ರೀ ಅಭಯಚಂದ್ರ ಅವರ ಅಧ್ಯಕ್ಷತೆಯಲ್ಲಿ ಆಲಂಗಾರು ಚರ್ಚ್‌ನ ಧರ್ಮಗುರು ರೆ।ಫಾ। ವಿನ್ಸೆಂಟ್ ಡಿಸೋಜರು ರ್‍ಯಾಲಿಯುನ್ನು ಉದ್ಘಾಟಿಸಿ ಶುಭ ಹಾರೈಸಿದರು. ತಾಲ್ಲೂಕು ಪಂಚಾಯಿತ್ ಅಧ್ಯಕ್ಷೆ ಶ್ರೀಮತಿ ಟಿ.ಎನ್. ಸವಿತಾ, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು ಬುಲ್‌ಬುಲ್ ಉತ್ಸವವನ್ನು ಅಬ್ಬಾಸ್ ಡಿಸ್ಸಾನರ್ ಡೋರ್‌ನ ಶ್ರೀ ಮಹಮದಾಲಿ ಅಬ್ಬಾಸ್ ಉದ್ಘಾಟಿಸಿದರು. ಶ್ರೀ ಆನಂದಕುಮಾರ್ ಮುಖ್ಯ ಅತಿಥಿಯಾಗಿದ್ದರು. ರ್‍ಯಾಲಿಯಲ್ಲಿ ವಲಯದ 393 ಸ್ಕೌಟ್ಸ್-ಗೈಡ್ಸ್ ಉತ್ಸವದಲ್ಲಿ 124 ಬುಲ್‌ಬುಲ್‌ಗಳು ಮತ್ತು 30 ಸ್ಕೌಟ್ಸ್-ಗೈಡ್ಸ್ ಶಿಕ್ಷಕ-ಶಿಕ್ಷಕಿಯರು ಭಾಗವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಕೆ. ರವಿಶಂಕರ ರಾವ್ ಅವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭವು ಜರುಗಿತು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ಆ್ಯಕ್ಕೊ ಇಂಡಸ್ಟ್ರೀಸ್ ಮಾಲೀಕ ಶ್ರೀ ಅಬ್ದುಲ್ ರವೂಫ್, ದೈಹಿಕ ಶಿಕ್ಷಣ ಸಂಯೋಜಕ ಶ್ರೀ ಪ್ರಸನ್ನಕುಮಾರ್ ಜೈನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅತಿಥೇಯ ಆಲಂಗಾರು ಶಾಲಾ ಮುಖ್ಯೋಪಾಧ್ಯಾನಿಯವರಾದ ಭಗಿನಿ ಸ್ಟೆಲ್ಲಾ ಕ್ರಾಸ್ತಾ, ಭಗಿನಿ ಮಾರ್ಥಾ ಡಿಅಲ್ಮೇಡಾ ಕಾರ್ಯಕ್ರಮ ಸಂಯೋಜಿಸಲು ಸಹಕರಿಸಿದರು.

ರೇ.ಫಾ. ಜೆರಾಲ್ಡ್ ಡಿಸೋಜ ಧರ್ಮಗುರುಗಳು ಹೋಲಿ ರಿಡಿಮರ್ ಚರ್ಚ್-ಬೆಳ್ತಂಗಡಿ ಇವರು ತಮ್ಮ ಶುಭ ಸಂದೇಶದ ಮೂಲಕ ಮೇಳವನ್ನು ಉದ್ಘಾಟಿಸಿದರು. ಶ್ರೀಯುತ ಬಿ.ಎಸ್. ಬಾಲಚಂದ್ರ ಪೋಲಿಸ್ ವೃತ್ತ ನಿರೀಕ್ಷಕರು ಬೆಳ್ತಂಗಡಿ ಇವರು ವೈವಿಧ್ಯಮಯವಾದ ಪಥ ಸಂಚಲನವನ್ನು ಉದ್ಘಾಟಿಸಿದರು.

ಆ ಮೇಳದಲ್ಲಿ ಸುಮಾರು 1200 ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್‌ಗಳು ಹಾಗೂ ಸುಮಾರು 150 ಶಿಕ್ಷಕ ಶಿಕ್ಷಕಿಯರು ಭಾಗವಹಿಸಿದ್ದರು.

ಬೆಳ್ತಂಗಡಿ ತಾಲೂಕು ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಲೀಲಾವತಿ ಇವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು. ಕುಮಾರಿ ವೀಣಾ ಅಧ್ಯಕ್ಷರು ನಗರ ಪಂಚಾಯತ್ ಬೆಳ್ತಂಗಡಿ, ಶ್ರೀಮತಿ ಹೇಮಾವತಿ ಉಪಾಧ್ಯಕ್ಷೆ ತಾಲೂಕು ಪಂಚಾಯಿತ್ ಬೆಳ್ತಂಗಡಿ, ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಎನ್.ಜಿ. ಮೋಹನ್, ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀರಾಮಶೇಷ ಶೆಟ್ಟಿ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್ ಬೆಳ್ತಂಗಡಿಯ ಶಿಕ್ಷಣಾಧಿಕಾರಿಯವರಾದ ಶ್ರೀ ಶೇಷ

ಶಯುನ ಕಾರಿಂಜೆ ಇವೆರೆಲ್ಲರೂ ಸಮಾರಂಭದಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಎಂ.ಆರ್.ಪಿ.ಐ.ಟಿ.ಐ. ಮುಲ್ಕಿಯಲ್ಲಿ ರೋವರ್ ಘಟಕದ ಉದ್ಘಾಟನೆ

ನಿಟ್ಟೆ ವಿದ್ಯಾ ಸಂಸ್ಥೆಯ ಅಂಗ ಸಂಸ್ಥೆ ಮುಲ್ಕಿಯ ಎಂ.ಆರ್.ಪಿ.ಐ.ಟಿ.ಐ. ಯಲ್ಲಿ ರೋವರ್ ಘಟಕವನ್ನು ನಿಟ್ಟೆ ವಿದ್ಯಾ ಸಂಸ್ಥೆಯ ಟ್ರಸ್ಟಿ ಮತ್ತು ಲೆಮಿನ ಸಮೂಹ ಸಂಸ್ಥೆಗಳ ನಿರ್ದೇಶಕ ಶ್ರೀ ಎನ್. ವಿಶಾಲ್ ಹೆಗ್ಡೆ ಉದ್ಘಾಟಿಸಿದರು. ಶ್ರೀ ರಾಮಕೃಷ್ಣಪೂಂಜಾ ಟ್ರಸ್ಟ್ ಅಧ್ಯಕ್ಷ ಹಾಗೂ ಸಂಸ್ಥೆಯ ಸ್ಥಾಪಕ ಎಂ.ಆರ್. ಹರಿಪೂಂಜಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಲ್ಕಿ ರೋಟರಿ ಅಧ್ಯಕ್ಷ ಶ್ರೀ ಹೆಚ್. ಅಬೂಬಕರ್, ಡಾ|| ಬಿ.ಎಚ್. ರಾಘವರಾವ್, ಸಹಾಯಕ ಜಿಲ್ಲಾ ಆಯುಕ್ತರು ಇವರು ಉಪಸ್ಥಿತರಿದ್ದರು. (ರೋ) ಶ್ರೀ ಜಯರಾಂ ಶೆಟ್ಟಿ, ಸಂಸ್ಥೆಯ ಪ್ರಾಶುಂಪಾಲರು ಸ್ವಾಗತಿಸಿದರು. ರೋವರ್ ಲೀಡರ್ ಶ್ರೀ ಸುರೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು.

ಮಂಗಳೂರು ನಗರದ ಸೈಂಟ್ ಆಗ್ನೇಸ್ ವಿಶೇಷ ಶಾಲೆ ಸ್ಕೌಟ್ಸ್-ಗೈಡ್ಸ್, ಕಬ್-ಬಲ್‌ಬುಲ್ ವಿದ್ಯಾರ್ಥಿಗಳ ಶಿಬಿರವು 23.2.2004 ರಂದು ಜರುಗಿತು. ಮಾನಸಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹಿರಿಯ ಸ್ಕೌಟ್ ಮಾಸ್ಟರ್ ಶ್ರೀ ವಸಂತ್ ಕುಮಾರ್ ಶೆಟ್ಟಿ ಶಾಲೆಯ ಸ್ಕೌಟರ್ - ಗೈಡರ್‌ಗಳ ಸಹಾಯದಿಂದ ವಿದ್ಯಾರ್ಥಿಗಳಿಗೆ ಕರಕುಶಲ ಚಟುವಟಿಕೆ, ಅಡುಗೆ ಮಾಡುವುದು, ಹಗ್ಗದ ಮೂಲಕ ಮರ ಏರುವುದು, ಸರ್ವಧರ್ಮ ಪ್ರಾರ್ಥನೆ ಶಿಬಿರಾಗ್ನಿ ಚಟುವಟಿಕೆಗಳನ್ನು ನೀಡಿದರು.

ಬೆಳಗಾಂ ಜಿಲ್ಲೆ

ದಿನಾಂಕ 6.2.2004 ರಿಂದ 15.2.2004ರ ವರೆಗೆ ಬರ್ಡ್ಸ್, ನವ ಪ್ರಭಾ ವಸತಿ ಶಾಲೆ - ತುಕ್ಕಾನಟ್ಟಿ ವಲಯ ಮೂಡಲಗಿ, ಗೋಕಾಕ ತಾಲ್ಲೂಕು ಇಲ್ಲಿ ಮೂಡಲಗಿ ವಲಯದ ಶಿಕ್ಷಕ-ಶಿಕ್ಷಕಿಯರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮೂಡಲಗಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸ್ಕೌಟ್ ಮಾಸ್ಟರ್ ಹಾಗೂ ಗೈಡ್ಸ್ ಕ್ಯಾಪ್ಟನ್‌ಗಳ ಮೂಲ ತರಬೇತಿ ಶಿಬಿರಗಳನ್ನು, ಮೂಡಲಗಿ ಸ್ಥಳೀಯ ಮಟ್ಟದಲ್ಲಿ ನಡೆಸಲಾಯಿತು.

ಸ್ಕೌಟ್ ಮಾಸ್ಟರ್ ಶಿಕ್ಷಕ ಮೂಲ ತರಬೇತಿ ಶಿಬಿರದಲ್ಲಿ 33 ಜನ ಶಿಕ್ಷಕರು, ಗೈಡ್ ಕ್ಯಾಪ್ಟನ್ ಮೂಲ ಶಿಕ್ಷಕಿಯರು ತರಬೇತಿ ಶಿಬಿರದಲ್ಲಿ 13 ಜನ ಶಿಕ್ಷಕಿಯರು ಮೂಲಡಗಿ ವಲಯದಿಂದ ಆಗಮಿಸಿ ಭಾಗವಹಿಸಿದ್ದರು.

ಸ್ಕೌಟ್ ಮಾಸ್ಟರ್ ಮೂಲ ತರಬೇತಿ ಶಿಬಿರದ ನಾಯಕರಾಗಿ ಶ್ರೀ ನಾಗೇಶ್, ಆರ್. ಶಿವಪುರರವರು ಹಾಗೂ ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರದ ನಾಯಕಿಯರಾಗಿ ಶ್ರೀಮತಿ ಲಕ್ಷ್ಮೀ ಎಸ್. ಮಂಗಿ ಇವರು ಕಾರ್ಯನಿರ್ವಹಿಸಿದರು.

ತರಬೇತಿ ಶಿಬಿರಗಳ ಉದ್ಘಾಟನೆಯನ್ನು ಮಾಜಿ ಶಾಸಕರು ಹಾಗೂ ಬರ್ಡ್ಸ್ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಆರ್.ಎಂ. ಪಾಟೀಲ ನಾಗನೂರು, ಇವರು ನೆರವೇರಿಸಿದರು. ಮೂಡಲಗಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಗಜಾನನ ಮಗ್ನಿಕೇರಿಯವರು ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಇದರಂತೆ ಮೂಡಲಗಿ ವಲಯುದ ಸಮಾಜ ಸೇವಕರಾದ ಶ್ರೀ ಪ್ರಕಾಶ ಬಾಗೇವಾಡಿ ಇವರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳ 'ದೀಕ್ಷಾ ಸಮಾರಂಭ' ಕ್ಕೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಎಂ.ಎಸ್. ಪಾಟೀಲ್‌ರವರು, ಬೆಳಗಾವಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಉಪಾಧ್ಯಕ್ಷರು ಆದ ಶ್ರೀ ಜಿ.ಎಂ. ಪಾಟೀಲರವರು, ಮಾಜಿ ಶಾಸಕರು ಹಾಗೂ ಬರ್ಡ್ಸ್ ಸಂಸ್ಥೆಯ ಅಧ್ಯಕ್ಷರು ಆದ ಶ್ರೀ ಆರ್.ಎಂ. ಪಾಟೀಲ್‌ರವರು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಶಿಕ್ಷಣಾಧಿಕಾರಿಗಳು ಆದ ಶ್ರೀ ಶಿರಹಟ್ಟಿ ಮಠದವರು,

ಮೂಡಲಗಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತರಬೇತಿ ಶಿಬಿರಗಳ ಕರ್ತೃ ಆದ ಶ್ರೀ ಜಿ.ಬಿ. ಮಣ್ಣಿಕೇರಿಯವರು ಹಾಗೂ ಗೋಕಾಕ್ ಭಾರತ್ ಸ್ಕೌಟ್ ಮತ್ತು ಗೈಡ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಆದ ಶ್ರೀ ವಿ.ಎ. ಸತ್ ಪುತೆಯುವರು ಹಾಗೂ ಮೂಡಲಗಿ ವಲಯದ 63 ಪ್ರೌಢಶಾಲೆ - ಕಾಲೇಜುಗಳ ಮುಖ್ಯಸ್ಥರು ಆಗಮಿಸಿ ಸಮಾರಂಭದಲ್ಲಿ ಭಾಗವಹಿಸಿ. ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳ ಹಿರಿಮೆ ಗರಿಮೆಯನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯ ಗೈಡ್ಸ್ ತರಬೇತಿ ಆಯುಕ್ತರು ಆದ ಶ್ರೀಮತಿ ಕೆ.ಕೆ. ಲೀಲಾರವರು ಕೇಂದ್ರ ಕಛೇರಿಯಿಂದ ಆಗಮಿಸಿ.

ಸಮಾರೋಪ ಸಮಾರಂಭ ದಿನಾಂಕ 14.2.2004 ರಂದು ಸಾಯಂಕಾಲ 5.00 ಗಂಟೆಗೆ ಶ್ರೀ ಜೀರಾಳೆ ಮುಖ್ಯೋಪಾಧ್ಯಾಯರು ನವಪ್ರಭಾ ವಸತಿ ಶಾಲೆ - ತುಕ್ಕಾನಟ್ಟಿ ಇವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಆರ್.ಎಸ್. ಕಾಕಡೆ ಪತ್ರಕರ್ತರು, ನಮಸ್ತೆ ವಾರ್ತೆಗಳು ಗೋಕಾಕ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಶ್ರೀ ಬಿ.ಎಂ. ನಿಡೋಣಿ ಕಾರ್ಯದರ್ಶಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಮೂಡಲಗಿ ಇವರು ಎಲ್ಲರಿಗೂ ವಂದಿಸಿದರು.

ಸಂಸ್ಥಾಪಕರ ದಿನಾಚರಣೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ದಿನಾಂಕ 22.02.2004 ರಂದು ಮುಂಜಾನೆ 10.00 ಗಂಟೆಗೆ ಸರಿಯಾಗಿ ಸೆಂಟಪಾಲ್ ಆಂಗ್ಲ ಮಾಧ್ಯಮ ಶಾಲೆ, ಕ್ಯಾಂಪ್ ಬೆಳಗಾವಿ ಇಲ್ಲಿ, ಸಂಸ್ಥೆಯ ಸಂಸ್ಥಾಪಕ ಲಾರ್ಡ್ ಬೇಡೆನ್ ಪಾವೆನ್ ಹಾಗೂ ಲೇಡಿ ಬೇಡನ್ ಪಾವೆಲ್‌ರವರ ಭಾವಚಿತ್ರ ಪೂಜೆ ಮಾಡುವದರೊಂದಿಗೆ ಹಾಗೂ ಜ್ಯೋತಿ ಬೆಳಗಿಸುವದರೊಂದಿಗೆ ಪ್ರಾರಂಭಿಸಿಲಾಯಿತು. ಮುಖ್ಯ ಅತಿಥಿಗಳಾಗಿ ಈ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಜಿ.ಎಂ. ಪಾಟೀಲ ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೆಳಗಾವಿ ಇವರು ನೇರವೇರಿಸಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳನ್ನು ಉದ್ದೇಶಿಸಿ ಮಾತನಾಡಿದರು. ಇದರಂತೆ ಬೆಳಗಾವಿಯ ಎ.ಎಸ್.ಓ.ಸಿ. (ಸ್ಕೌಟ್ಸ್) ರವರಾದ ಶ್ರೀ ನಾಗೇಶ ಆರ್. ಶಿವಪೂರ ಇವರು ಭಾಗವಹಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಂಸ್ಥಾಪಕರ ಆದರ್ಶಗಳನ್ನು ಹಾಗೂ ಜೀವನ ಚರಿತ್ರೆಯನ್ನು ಕುರಿತು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಮನ ಮುಟ್ಟುವಂತೆ ಮಾತನಾಡಿದರು.

ಈ ಸಮಾರಂಭದ ಸಂಘಟಕರಾದ ಶ್ರೀ ಜೆ.ಎಸ್. ಫರ್ನಾಂಡಿಸ್ ಸೀನಿಯರ್ ಸ್ಕೌಟ್ ಮಾಸ್ಟರ್ ಸೆಂಟ್‌ಪೌಲ್ ಶಾಲೆ ಹಾಗೂ ಶ್ರೀಮತಿ ಮೀನಾಗಾಮಾ, ಗೈಡ್ ಕ್ಯಾಪ್ಟನ್ ಸೆಂಟ್ ಜೋಸೆಫ್ ಶಾಲೆ, ಬೆಳಗಾವಿ ಇವರು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಂದ 'ಸರ್ವಧರ್ಮ ಪ್ರಾರ್ಥನಾ ಸಭೆ' ಹಾಗೂ 'ಕ್ವಿಜ್' ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಸಂಘಟಿಸಿದ್ದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಗುರುವೃಂದ ಹಾಗೂ ಪಾಲಕರು ಉಪಸ್ಥಿತರಿದ್ದರು. ಸೆಂಟ್‌ಪಾಲ್ ಹಾಗೂ ಸೆಂಟ್ ಜೋಸೆಫ್ ಸಂಸ್ಥೆಗಳ ಒಟ್ಟು 86 ಜನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿ ದಿನಾಚರಣೆಯ ಯಶಸ್ವಿಗೆ ನಾಂದಿಯಾದರು.

ಬಾಗಲಕೋಟೆ ಜಿಲ್ಲೆ

ದಿನಾಂಕ 4.1.2004 ರಿಂಜ 6.1.2004ರ ವರೆಗೆ ನಡೆದ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಜಿಲ್ಲೆಯ ಬಾಗಲಕೋಟೆ ತಾಲೂಕಿನ 20 ಗೈಡ್ಸ್, 15 ಸ್ಕೌಟ್ಸ್ ಮತ್ತು 5 ರೋವರ್ಸ್‌ಗಳು ಜಿಲ್ಲಾ ಸರಕಾರಿ ಆಸ್ಪತ್ರೆಗಳು ಮತ್ತು ಕೇಂದ್ರಗಳು ಬಾಗಲಕೋಟೆ ಮತ್ತು ನವನಗರಗಳಲ್ಲಿ ಕಾರ್ಯನಿರ್ವಹಿಸಿ ಸೇವೆ ಸಲ್ಲಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳು, ಡಿ.ಓ.ಸಿ.ಗಳು ಪ್ರಮುಖ ಪಾತ್ರವಹಿಸಿದ್ದರು ಜಿಲ್ಲಾ ಆರೋಗ್ಯ ಘಟಕದವರು ಶ್ಲಾಘಿಸಿರುತ್ತಾರೆ.

ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಸ್ಕೌಟ್ಸ್, ಗೈಡ್ಸ್ ಮತ್ತು ಶಾಲಾ ಮಕ್ಕಳುಗಳು.

ಬೆಂಗಳೂರು ಗ್ರಾಮಾಂತರ ಜಿಲ್ಲೆ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳು ಸಂಯುಕ್ತಾಶ್ರಯದಲ್ಲಿ ಸ್ಕೌಟ್ ಶಿಕ್ಷಕ ಮತ್ತು ಗೈಡ್ಸ್ ಶಿಕ್ಷಕಿಯರಿಗೆ ಎರಡನೆ ಹಂತದ ಮೂಲ ತರಬೇತಿ ಶಿಬಿರವನ್ನು ದೊಡ್ಡ ಬಳ್ಳಾಪುರದ ಬೆಸೆಂಟ್ ಪಾರ್ಕ್‌ನಲ್ಲಿ ದಿನಾಂಕ 24.2.2004 ರಿಂದ 29.2.2004ರ ವರೆಗೆ ಯಶಸ್ವಿಯಾಗಿ ನಡೆಸಲಾಯಿತು.

ಸ್ಕೌಟ್ ಶಿಕ್ಷಕರ ಶಿಬಿರದಲ್ಲಿ 30 ಶಿಬಿರಾರ್ಥಿಗಳು ಹಾಗೂ ಗೈಡ್ ಶಿಕ್ಷಕಿಯರ ತರಬೇತಿ ಶಿಬಿರದಲ್ಲಿ 18 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶ್ರೀ ಎನ್. ಬಸವರಾಜ್, ಎ.ಎಲ್.ಟಿ.(ಎಸ್) ಹಾಗೂ ಶ್ರೀಮತಿ ಕೆ.ಎಸ್. ಶಾರದ, ಎ.ಎಲ್.ಟಿ.(ಜಿ) ಇವರುಗಳು ನಾಯಕತ್ವ ವಹಿಸಿದ್ದರು.

ಶ್ರೀಮತಿ ರಹಮತ್ತುನ್ನೀಸಾ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಂಸ್ಥೆಯ ಉಪನ್ಯಾಸಕರಾದ ಶ್ರೀ ಗೋಪಾಲಕೃಷ್ಣರವರು ಶಿಬಿರದ ಸಂಯೋಜಕರಾಗಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪನವರು ಶಿಬಿರದ ಸಂಚಾಲಕರಾಗಿದ್ದರು. ಶ್ರೀ ಮಾಧವ ಸಿಂಗ್, ಎಸ್.ಟಿ.ಸಿ.(ಎಸ್) ರವರು ಶಿಬಿರಕ್ಕೆ ಭೇಟಿ ನೀಡಿದ್ದರು. ಈ ಶಿಬಿರಗಳು ಸಾರ್ವ ಶಿಕ್ಷಣ ಇಲಾಖೆಯ ಸರ್ವಜನಿಕ ಶಿಕ್ಷಣ ಅಭಿಯಾನದ ಅಡಿಯಲ್ಲಿ ನಡೆಸಲಾಯಿತು.

ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶವು ದಿನಾಂಕ 5.3.2004 ಮತ್ತು 6.3.2004 ನೆಲಮಂಗಲದ ಪವಾಡ ಶ್ರೀ ಬಸವಣ್ಣ ದೇವರ ಮಠದಲ್ಲಿ ನಡೆಯಿತು. ದಿನಾಂಕ 5.3.2004 ರಂದೆ ಶಿಕ್ಷಕರು ಶಿಬಿರಕ್ಕೆ ಆಗಮಿಸಿ ಹೆಸರು ನೋಂದಾಯಿಸಿದರು. ಅಂದು ಸಂಜೆ 4 ಗಂಟೆಗೆ ಸಮಾವೇಶದ ಉದ್ಘಾಟನೆಯನ್ನು ಮಾಗಡಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಗಂಗಾಧರಯ್ಯನವರು ನಡೆಸಿಕೊಟ್ಟರು. ಹಾಗೂ ನೆಲಮಂಗಲ ತಾಲ್ಲೂಕು ಶಿಕ್ಷಣಾಧಿಕಾರಿಗಳಾದ ಶ್ರೀ ಈಶ್ವರಯ್ಯನವರು ಅಧ್ಯಕ್ಷತೆವಹಿಸಿದ್ದು, ವಿಷಯ ನಿರೀಕ್ಷಕರಾದ ಶ್ರೀ ನಾರಾಯಣ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾತ್ರಿ ಭವ್ಯ ಶಿಭಿರಾಗ್ನಿ ಅತ್ಯಂತ ಸ್ಪೂರ್ತಿಯುತವಾಗಿ ನಡೆಯಿತು.

ಸಮಾವೇಶದಲ್ಲಿ ಎರಡೂ ತಾಲ್ಲೂಕುಗಳ ಒಟ್ಟು 85 ಶಿಕ್ಷಕರು ಭಾಗವಹಿಸಿದ್ದರು. ಸಮಾವೇಶದ ನಾಯಕತ್ವವನ್ನು ಶ್ರೀ ಬಿ. ರಾಜಶೇಖರ, ಎ.ಎಲ್.ಟಿ. ವಹಿಸಿದ್ದರು.

ದಿನಾಂಕ 6.3.2004 ರಂದು ಬೆಳಿಗ್ಗೆ ನಡೆದ ಸರ್ವಧರ್ಮ ಪ್ರಾರ್ಥನೆಯಲ್ಲಿ ಸ್ಥಳೀಯ ಮಠದ ಸ್ವಾಮೀಜಿಯವರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಭಾಗವಹಿಸಿದ್ದರು. ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ನಾರಾಯಣ ಶೆಟ್ಟಿ, ರಾಜ್ಯ ತರಬೇತಿ ಆಯುಕ್ತರಾದ (ಗೈ) ಶ್ರೀಮತಿ ಕೆ.ಕೆ. ಲೀಲಾ, ರಾಜ್ಯ ಮುಖ್ಯ ಕಛೇರಿಯ

ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಎಂ.ಎ. ಚಲ್ಲಯ್ಯ, ಶ್ರೀ ಎನ್. ಬಸವರಾಜ, ಎ.ಎಲ್.ಟಿ. (ಎಸ್) ಇವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. (ಎಸ್), ಶ್ರೀ ನಂಜುಂಡಯ್ಯ, ಜಿಲ್ಲಾ ಕಾರ್ಯದರ್ಶಿ, ಶ್ರೀ ಶಿವನಂಜಪ್ಪ ಮತ್ತು ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಶಿವಕುಮಾರ್, ಶ್ರೀ ಎಂ. ಗಂಗಬೋರೇಗೌಡ ಭಾಗವಹಿಸಿದ್ದರು.

ಸಮಾವೇಶದಲ್ಲಿ ಸ್ಕೌಟರ್ಸ್, ಗೈಡರ್ಸ್‌ಗಳ ಮುಂದುವರೆದ ತರಬೇತಿ, ಸ್ಕೌಟ್-ಗೈಡ್ಸ್ ಪ್ರಗತಿಪರ ಶಿಕ್ಷಣ, ಸ್ಕೌಟರ್ಸ್, ಗೈಡರ್ ಕರ್ತವ್ಯ, ಸಾರ್ವಜನಿಕ ಸಂಪರ್ಕ, ಸ್ಕೌಟ್ ಮತ್ತು ಗೈಡ್ಸ್ ತತ್ವ, ಧ್ವಜಾರೋಹಣ ಪದ್ಧತಿ ಇತ್ಯಾದಿಗಳ ಬಗ್ಗೆ ತಿಳಿಸಲಾಯಿತು.

ಈ ಶಿಬಿರದಲ್ಲಿ ಸ್ಥಳೀಯ ಶಾಸಕರಾದ ಶ್ರೀ ಆಂಜನಮೂರ್ತಿ, ನೆಲಮಂಗಲ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಜಿ.ಎಸ್. ರಂಗನಾಥ್ ಮತ್ತು ಪಟ್ಟಣ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ರವಿಯವರು ಭಾಗವಹಿಸಿದ್ದರು. ಶ್ರೀ ಬೈಲನರಸಯ್ಯನವರು ನಿವೃತ್ತ ಮುಖ್ಯೋಪಾಧ್ಯಾಯರು ಇಡೀ ಸಮಾವೇಶದ ಸಂಘಟಕರಾಗಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟರು.

ಗುಲಬರ್ಗಾ ಜಿಲ್ಲೆ

ದೀಕ್ಷಾ ಸಮಾರಂಭ

ದಿನಾಂಕ 1.3.2004 ರಂದು ನಗರದ ಬಸವೇಶ್ವರ ಪ್ರೌಢ ಶಾಲೆ ಗದ್ದುಗೆ ಮಠ ಮುಕ್ತಂಪೂರ - ಗುಲಬರ್ಗಾ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ದೀಕ್ಷಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಂಸ್ಥೆಯ ಮುಖ್ಯ ಗುರುಗಳಾದ ಶ್ರೀ ಬಿಸ ಶಿವಕುಮಾರಸ್ವಾಮಿ ಹಾಜರಿದ್ದು. ಮಕ್ಕಳಿಗೆ ಆಶೀರ್ವದಿಸಿದರು.

ದಿನಾಂಕ 22.2.2004 ರಂದು ಬಿ.ಪಿ. ಯವರ ಜನ್ಮದಿನಾಚರಣೆಯಂಗವಾಗಿ ನಡೆದ ಕಾರ್ಯಕ್ರಮವನ್ನು ಶ್ರೀ ಶಿವಶರಣಪ್ಪ ಮುಡ್ಡಿಕರ ಪ್ರಾಚಾರ್ಯರು ಸರಕಾರಿ ಬಾಲಕರ ಪದವಿ ಪೂರ್ವ ಮಹಾವಿದ್ಯಾಲಯ ಗುಲಬರ್ಗಾ ಇವರಿಂದ ಉದ್ಘಾಟಿಸಲಾಯಿತು.

ಚಿತ್ರದುರ್ಗ ಜಿಲ್ಲೆ

ಚಿತ್ರದುರ್ಗ ಜಿಲ್ಲೆಯುಲ್ಲಿ ನಡೆದ ಸ್ಥಾಪಕರದಿನಾಚರಣೆಯಲ್ಲಿ ಪಾಲ್ಗೊಂಡ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು

ಮೈಸೂರು ನಗರ ಜಿಲ್ಲೆ

ದಿನಾಂಕ 7.2.2004ರಂದು ಮೈಸೂರಿನಲ್ಲಿ ನಡೆದ ಜಿಲ್ಲಾ ಮೇಳದಲ್ಲಿ ಪಾಲ್ಗೊಂಡ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು

ಚಾಮರಾಜನಗರ ಜಿಲ್ಲೆ



ನಂಜನಗೂಡು ನಗರ ಶ್ರೀ ಈಶ್ವರಭವನದಲ್ಲಿ ನಡೆದ ನೂತನ ಜಿಲ್ಲಾ ಸಂಸ್ಥೆ ಸ್ಕೌಟ್ಸ್ ಮತ್ತು ಗೈಡ್ಸ್ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಶ್ರೀ ವಿ.ಎಂ. ರಾಮಚಂದ್ರ, ಶ್ರೀ ಆರ್.ವಿ. ಮಹಾದೇವಸ್ವಾಮಿ, ಶ್ರೀ ಮೈರಾಡ ಸಂಸ್ಥೆ ಅಧಿಕಾರಿ, ಶ್ರೀ ವೈ.ಕೆ.ಎಲ್. ಸ್ವಾಮಿ, ಶ್ರೀ ಸ್ವಾಮಿ, ಶ್ರೀ ಜಿ.ಆರ್. ಅಶ್ವತ್ ನಾರಾಯಣ, ಶ್ರೀಮತಿ ಶೈಲಾಬಾಲ್‌ರಾಜ್, ಶ್ರೀ ಬಸವರಾಜು, ಶ್ರೀ ರಾಮ್ ಪ್ರಸಾದ್ ಇವರುಗಳನ್ನು ಚಿತ್ರದಲ್ಲಿ ಕಾಣಬಹುದು.

ಗಮನಿಸಿ

೨೦೦೩-೨೦೦೪ನೇ ಸಾಲಿನಲ್ಲಿ ಜಿಲ್ಲಾ ಸಂಸ್ಥೆಗಳಿಗೆ ನೀಡಿರುವ ಗಣತಿಯನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲು ರಾಜ್ಯ ಸಂಸ್ಥೆಯು ಮನವಿ ಮಾಡಿದೆ.

ಜಿಲ್ಲಾ ಸಂಸ್ಥೆಗಳು ೨೦೦೩-೨೦೦೪ನೇ ಸಾಲಿನಲ್ಲಿ ನಡೆಸಿದ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಕೂಡಲೇ ರಾಜ್ಯ ಕಛೇರಿಗೆ ಕಳುಹಿಸಲು ಕೋರಿದೆ.

೨೦೦೩-೨೦೦೪ನೇ ಸಾಲಿನ ಸ್ಥಳಿಯ ಸಂಸ್ಥೆಗಳ ಹಾಗೂ ಮುಕ್ತ ದಳಗಳ ನವೀಕರಣ ಶುಲ್ಕವನ್ನು ವರದಿಯೊಂದಿಗೆ ಕೂಡಲೇ ರಾಜ್ಯ ಕಛೇರಿಗೆ ಕಳಿಸಲು ಕೋರಿದೆ.

- ರಾಜ್ಯ ಕಾರ್ಯದರ್ಶಿ

Please Subscribe to Karnataka Scout and Guide News Magazine

Individual Subscription	*Rs. 25.00 per year*
Institutional Subscription	*Rs. 100.00 per year.*
Life Subscription	*Rs. 500.00*

Quiz 5 : On Scouting for Boys

1. *What does this woodcraft signmean ?* 
2. *Which patrol cries as 'Kreeee' ?*
3. *Where should the special scout signs be used ?*
4. *What is a good exercies for a winter's evening ?*
5. *Can a scouts patrol accept money for a service rendered to the society ?*
6. *Each member of which tribe was a warrior in south Aftrica ?*
7. *What test was preseribed to the boys of Yaghan tribe of South America, before considering them as men ?*
8. *What is the name of the book, writher by 'Bill Hamilton' ?*
9. *Who wrote this, "I believe in outdoor games and I do not mind in the least that they are rought games."*
10. *B.P. wrote, "Therefore they had on idra of how to set about finding water in a desert place by looking at the grass or bush or by seratching sand....."*

Under what heading B.P. Worte then ?

*(**Note :- 1.** For answere read C.F.Y. No. 4 & 5. **2.** Please send your answers to the Editor to reach him befor 15.04.2004 the names of first three persons who send correct answers will be published in the next magazine. **3.** The answers to Quiz 4 are given below.)*

By *Mohamed Wasil*
Headquarters Commissioner (programme)

KEY TO QUIZ NO. 4.

(1) 6 to 8 Boys (2) To give individual definite responsibility to as many as possible (3) Because it is a teamwork and each should work for honour of patrol (4) The P.L. Should be efficient in scout craft. He should ask his scouts to do anywork which he can do himself. (5) The Council of P.L.'s and Patrol Seconds is C.O.H. (6) No. (7) Yes (8) No. (9) Animals and Birds (10) P.L. on his staff.

100 2007

A Hundred years of Promise

in 2007, Scouting will celebrate its Centenary

2007 is the dawn of a new century of Scouting. We should celebrate the future of Scouting /Guiding and look to how we can improve it to meet the needs of even more young people, their families and communities world-wide.

Regd as News Paper (Magazine) No : CPMG/KA/BGW-549/2002-05

ಕರ್ನಾಟಕ ಸ್ಕೌಟ್ ಮತ್ತು ಗೈಡ್

KARNATAKA SCOUT & GUIDE

News Magazine

BOOK-POST

If not delivered please return to :

EDITOR, Karnataka Scout & Guide
State Headquarters, Prof. P. Sivashankar Circle
Kondajji Basappa Road, Fort
Bangalore - 560 002

Published for : The Bharat Scouts & Guides, Karnataka, State Headquarters, Fort, Bangalore - 560 002
by the State Secretary and Printed at : Sathyasri Printers (Pvt) Ltd., 5th Main, Chamarajpet, Bangalore - 560 018.